
ಚಿತ್ತರಗಿ-ಇಲಕಲ್ಲ
ವಿಜಯ ಮಹಾಂತ ಶಿವಯೋಗಿಗಳು

ಪಂಚಾಕ್ಷರಿ ಹಿರೇಮಠ



ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ – 251

ಚಿತ್ತರಗಿ-ಇಲಕಲ್ಲ
ಶ್ರೀ ವಿಜಯಮಹಾಂತ ಶಿವಯೋಗಿಗಳು

ಪಂಚಾಕ್ಷರಿ ಹಿರೇಮಠ

ಐ ಬಿ ಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು–560 009

SREE VIJAYAMAHANTHA SHIVAYOGIGALU — written in Kannada by Panchakshari Hiremath. Published by P. N. Kamat, I B H Prakashana, Fifth Main Road, Gandhinagar, Bangalore-560 009

ಬೆಲೆ : ರೂ. [illegible]

*

*

ಮುಖಪುಟ : ಚಂದ್ರನಾಥ್

*

ಮೊದಲನೆಯ ಮುದ್ರಣ : 1975

ಪ್ರಕಾಶಕರು : ಪಿ. ಎನ್. ಕಾಮತ್, ಐ ಬಿ ಎಚ್ ಪ್ರಕಾಶನ, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009. ಮುದ್ರಕರು : ಎಚ್. ಎಸ್. ಎನ್. ರಾವ್, ಐ ಬಿ ಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು - 560 054

*

ಅಧಿಕೃತ ಮಾರಾಟಗಾರರು :

ಇಂಡಿಯ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು-560 009

"Paper used for printing this book was made available by Government of India at concessional rate **for 3,000 copies only."**

ಶ್ರೀ ವಿಜಯ ಮಹಾಂತೇಶ ಸುಪ್ರಭಾತವ ಕೇಳು!
ಜಯಕೆ ಜಯವೀವ ಶ್ರೀ ವಿಜಯಗೊಂದಿಸಲೇಳು!
ಏಳು ಏಳೈ ಜೀವ; ನೀನೇಳು; ಶುಭಗೇಳು!
ಬೆಳಗಾದುದೆದ್ದೇಳು; ಬೆಳಕಾಗಲೇಳು........

..

ಪೂಜೆ ಸಾಗಿಹುದಲ್ಲಿ ಇಲಕಲ್ಲ ಪುರದಲ್ಲಿ
ಕಣ್‌ಬಿಟ್ಟು ನೀನದನು ಕಾಣಲೇಳು;
ಕಿವಿಗೊಟ್ಟು ಮಹಾಂತನುತಿ ಕೇಳಲೇಳು.

ಹೌದು ಇಲಕಲ್ಲದಲ್ಲಿ ಊರ ಹೊರಗೆ ಎರಡು ಹಳ್ಳಗಳ ಸಂಗಮಸ್ಥಾನದ ಏರಿಯ ಮೇಲಿರುವ ಮಠದ ತೋಟದಲ್ಲಿ ಮಹಾಮಹಿಮಶಾಲಿಯಾದ ಶ್ರೀ ವಿಜಯ ಮಹಾಂತೇಶ್ವರರ ಹಾಗೂ ಅವರ ಗುರುಗಳಾದ ಶ್ರೀ ಗುರು ಮಹಾಂತಸ್ವಾಮಿಗಳ ಗದ್ದುಗೆಗಳಿರುವ ಆ ತಾಣ ನಿಜಕ್ಕೂ ಪರಮ ಪವಿತ್ರ ಹಾಗೂ ಜಾಗೃತವಾಗಿರುವ ತಾಣ........

ಅಲ್ಲಿಯ ಆ ಪ್ರಶಾಂತತೆ, ಆ ಗಂಟೆ ಜಾಗಟೆ ನಗಾರಿಗಳ ಸುನಿನಾದ, ಸುತ್ತಲೂ ಹಬ್ಬಿರುವ ತೆಂಗು ಬಾಳೆಗಳ ಮೈಮುರಿವ ಹಚ್ಚ ಹಸಿರು, ಬಸವತೀರ್ಥ ಹರಿವ ಹಳ್ಳ, ಆ ಪ್ರಸನ್ನಮಯ ಏಕಾಂತತೆ, ಚಿಲಿಪಿಲಿಗುಟ್ಟುವ ಆ ಪಕ್ಷಿ ಸಂಕುಲದ ಮಿಾಸಲು ಗಾನಮಾಧುರ್ಯ, ಸೂಸುವ ಮಂದ ಸಮಿಾರಣ ಎಲ್ಲವೂ ವಿಜಯಮಹಾಂತೇಶನ ಸಾನ್ನಿಧ್ಯವನ್ನು 'ಇದು ತಪೋಭೂಮಿ' ಎಂದು ಸಾರುತ್ತಲಿದೆ.

ತಂಗಾಳಿ ತಂಪುಂಡು ಜಗದಂಗ ಮಡಿಯಾಗಿ,
ಸುಪ್ರಭಾತೈಸಿರಿಗೆ ಮೈಯೂರಿ, ಹೃದಯೇರಿ,
ವಿಜಯಮಹಾಂತನ ಪೂಜೆಗೈಯುತಿದೆ ನೋಡೇಳು;
ಬೆಳೆಚುಕ್ಕೆ ಬೆಳಕದನೆ ಭಸಿತಲೇಪನ ಮಾಡಿ,
ಫಲವು ಪುಷ್ಪದ ಗಂಧ ಸೌಗಂಧವನೆ ಪೂಸಿ
ತರು–ಲತಾತಂಬಲರು ಪತ್ತುರಿಯ ಧರಿಸುತಿದೆ.
ಪಶುಪಕ್ಷಿ ಬಳಗದಿಂಚರ ಮಂತ್ರ ಪಠಿಸುತಿದೆ.
ಹೊಂಬೆಳಗ ಹೊಂದೀಪ ಬೆಳಗಿ, ಮಹಾಂತನಿಗೆರಗಿ
ಹರಕೆ ಶಿರಕಿರಿಸಿ ರವಿಯರಸಿ, ಜಗಬೆಳಗಿಹುದು.

....

ಏಳು ಏಳೈ ಜೀವ; ನೀನೇಳು ಶುಭಗೇಳು;
ಬೆಳಗಾದುದೆದ್ದೇಳು; ಬೆಳಕಾಗಲೇಳು;

* * * * *

ಇಂದಿಗೆ ಸುಮಾರು ಒಂದುನೂರ ಇಪ್ಪತ್ತೈದು ವರ್ಷಗಳ ಹಿಂದೆ ಶಾಲಿವಾಹನ ಶಕೆ ಹದಿನೇಳನೂರ ಎಪ್ಪತ್ತೆರಡರ ಸಾಧಾರಣನಾಮ ಸಂವತ್ಸರ, ಜೇಷ್ಠ ಕೃಷ್ಣಪಕ್ಷ, ಭಾನುವಾರ (ಕ್ರಿ. ಶ. ಸಾವಿರದೆಂಟುನೂರ ಐವತ್ತು) ದಂದು ಯದುಕುಲ ಮಹಾರಾಜರು ಆಳುತ್ತಿದ್ದ ಅಂದಿನ ಮೈಸೂರು ಸಂಸ್ಥಾನದ ಸಸಿವಾಳವೆಂಬ ಗ್ರಾಮದಲ್ಲಿ ಶ್ರೀಗಳ ಜನನವಾಯಿತು. ಸಸಿವಾಳ ಲಿಂಗವಂತರಿಂದ ತುಂಬಿ ತುಳುಕುವ ಗ್ರಾಮ. ಆ ಗ್ರಾಮದ ಹಿರೇಮಠದ ವೀರಯ್ಯನವರು ತಮ್ಮ ಲಿಂಗಾನುಷ್ಠಾನ, ಲಿಂಗಾಚರಣೆ, ಲಿಂಗದ ನುಡಿ, ಲಿಂಗದ ನಡೆಗಳಿಂದಾಗಿ ಸಸಿವಾಳಕ್ಕೆ ಅಷ್ಟೇ ಅಲ್ಲದೆ ಸುತ್ತಲ ಹತ್ತು ಗ್ರಾಮಕ್ಕೇ ಪರಮಪೂಜ್ಯರಾಗಿದ್ದರು. ವೀರಯ್ಯನವರ ಮನೋಧರ್ಮಕ್ಕೆ, ಆದರ್ಶಕ್ಕೆ ಪೂರಕವಾಗಿ ನಡೆದುಕೊಳ್ಳಬಲ್ಲ, ಪತಿಯೇ ಪರದೈವವೆಂದು ತಿಳಿದು ಆಚರಿಸುವ

ಮಹಾಸಾಧ್ವಿ ಶಿರೋಮಣಿಯಾಗಿದ್ದರು ಅವರ ಧರ್ಮಪತ್ನಿ ಗೌರಮ್ಮನವರು.

ಭಕ್ತತಿಂಥಿಣಿಯೆಲ್ಲ ಈ ದಂಪತಿಗಳನ್ನು ತಮ್ಮ ಪಾರಮಾರ್ಥ ಬದುಕಿನ ತಂದೆ ತಾಯಿಗಳೆಂದೇ ಭಾವಿಸಿ, ಅವರೊಂದಿಗೆ ಅದೇ ತೆರನಾಗಿ ನಡೆದುಕೊಳ್ಳುತ್ತಿದ್ದರು.

ಲಿಂಗಸಂಸಾರಿಗಳಾದ ಈ ದಂಪತಿಗಳಿಗೆ ಮೂವರು ಮಕ್ಕಳು. ಮೊದಲನೆಯವಳು ಮಗಳು, ಎರಡನೆಯವ ಮಗ, ಮೂರನೆಯ ಮಗುವೇ ಮುಂದೆ ಚಿತ್ತರಗಿ ಪೀಠದ ಅಧಿಪತಿಯಾದ ಶ್ರೀ ವಿಜಯಮಹಾಂತೇಶ.

ಈ ಮಗು ಪರಮ ತಪೋನಿಧಿಗಳಾಗಿದ್ದ ಮುರುಳಸಿದ್ಧ ಶಿವಯೋಗಿಗಳಲ್ಲದೆ ಬೇರಿನ್ನಾರೂ ಅಲ್ಲ ಎಂದು ಹೇಳುವ ಆಖ್ಯಾಯಿಕೆಯೂ ಒಂದಿದೆ.

ಈ ದಂಪತಿಗಳ ಲಿಂಗಸಾರಾಯದ ಬದುಕಿಗೆ ಬಹುವಾಗಿ ಮೆಚ್ಚಿಕೊಂಡ ಅನೇಕ ಪೂಜ್ಯ ತಪಸ್ವಿಗಳು ಆಗಾಗ ಬಂದು ದರ್ಶನವೀಯುತ್ತಿದ್ದರು. ಆಗ ಈ ದಂಪತಿಗಳಿಗೆ ಒಂದು ಹೆಣ್ಣು ಹಾಗೂ ಒಂದು ಗಂಡು ಇಬ್ಬರೇ ಮಕ್ಕಳಿದ್ದರು. ಹೀಗೆ ಒಮ್ಮೆ ಒಬ್ಬರು ಶಿವಯೋಗಿಗಳು ಬಂದಾಗ ಮಠದಲ್ಲಿ ಅನುಷ್ಠಾನ ಮುಗಿಸಿ ಪಾದೋದಕ ಪ್ರಸಾದದ ನಂತರ ದಂಪತಿಗಳಿಗೆ ಆಶೀರ್ವಾದಮಾಡಿ ಗೌರಮ್ಮನವರ ಉಡಿಯಲ್ಲಿ ಆಶೀರ್ವಾದದ ಫಲವಿಡುತ್ತ "ತಾಯಿ, ನೀನು ಲೋಕೋತ್ತರನಾದ ಮಗನ ತಾಯಿಯಾಗಲಿರುವೆ. ವೀರಯ್ಯನವರೇ, ನೀವಿಬ್ಬರೂ ತುಂಬ ಭಾಗ್ಯಶಾಲಿಗಳು. ಇನ್ನು ಮುಂದೆ ಹುಟ್ಟಲಿರುವ ಶಿಶು ಮಹಾಶಿವಯೋಗಿಯಾಗಲಿದ್ದಾನೆ. ಬಹು ಎಚ್ಚರದಿಂದ ಜೋಪಾನ ಮಾಡಿ. ನಿಮಗೆ ಮಂಗಲವಾಗಲಿ" ಎಂದು ಆಶೀರ್ವದಿಸಿದರು.

ಆ ಪೂಜ್ಯರು ಹೋಗಿ ಕೆಲ ಮಾಸಗಳು ಕಳೆದಿರಬೇಕು. ಒಂದು ರಾತ್ರಿ ಬ್ರಾಹ್ಮೀ ಮುಹೂರ್ತದಲ್ಲಿ ಗೌರಮ್ಮನವರು ಕನಸಿನಲ್ಲಿ ಪರುಷದ ಗಿರಿಯನ್ನು ಕಂಡರು. ಮಹಾಲಿಂಗದ ಸುತ್ತ ಅನಂತಕೋಟಿ ಸೂರ್ಯಚಂದ್ರರು ಬೆಳಗುತ್ತಿದ್ದು ದನ್ನು ನೋಡಿದರು. ಅತಿಶಯದ ಆ ಬೆಳಗಿನಲ್ಲಿಂದ ಬೆಳ ಕಿನ ಪುಂಜವೊಂದು ತನ್ನತ್ತ ಬಂದಂತಾದುದಷ್ಟೇ ಅಲ್ಲ, ತನ್ನಲ್ಲೇ ಅಡಗಿದಂತಾದುದನ್ನೂ ಅನುಭವಿಸಿದರು. ಪಕ್ಕನೆ ಕಣ್ಣು ತೆರೆದಾಗ ಯಾವುದೋ ಅಲೌಕಿಕ ಸುಖ ಆ ತಾಯಿಯ ಮೈ ಮನವನ್ನೆಲ್ಲ ಆವರಿಸಿತ್ತು. ಆ ಸುಖದಲ್ಲಿಯೇ ಪಕ್ಕ ದಲ್ಲಿದ್ದ ಪತಿಯನ್ನು ಎಬ್ಬಿಸಿ ತಾನು ಕಂಡುದನ್ನು ಹೇಳಿ ದಾಗ ವೀರಯ್ಯನವರಿಗೂ ಅಚ್ಚರಿ, ಪರಮಾನಂದ. ಶಿವ ಯೋಗಿಗಳು ಹೇಳಿದ ನುಡಿಗಳ ನೆನಪು ಇಬ್ಬರಿಗೂ ಆಯಿತು.

ದಂಪತಿಗಳು ಮುಂಬರುವ ಸುಪುತ್ರನನ್ನು ನೆನೆಯುತ್ತ ಆನಂದಿಸುತ್ತಿರುವಾಗಲೇ ಬೆಳಕು ಹರಿಯಿತು ; ಪಶುಪಕ್ಷಿ ಗಳು ಕಿಲಕಿಲ ನಾದಗೈಯಲಾರಂಭಿಸಿದವು. ಅಂದಿನ ಬೆಳಗು ಸಸಿವಾಳದ ಹಿರೇಮಠದಲ್ಲಿ ವಿಶೇಷ ಬೆಳಗಾಯಿತು. ಅಂದಿ ನಿಂದ ಆ ಮನೆಯಲ್ಲಿ ಪರಮಭಾಗ್ಯದ ಬರುವಿಗಾಗಿ ಸಿದ್ಧತೆ ನಡೆದವು. ಗೌರಮ್ಮನವರು ಗರ್ಭ ಧರಿಸಿದರು. ದಿನಗಳೆದಂತೆ ಆ ಮಹಾತಾಯಿಗೆ ಬಯಕೆಗಳು ಮೂಡತೊಡಗಿದವು ; ಶಿವಕೀರ್ತನೆ, ಶಿವಭಜನೆ, ಶಿವಸ್ತೋತ್ರ ಕೇಳುವ ಬಯಕೆ. ಸದಾಕಾಲ ಲಿಂಗಪೂಜೆಯ ಬಯಕೆ, ಗುರುಲಿಂಗಜಂಗಮರ ಸೇವಾಬಯಕೆ. ವೀರಯ್ಯನವರಿಗೋ ತಮ್ಮ ಪತ್ನಿಯ ಈ ಸಲದ ಬಯಕೆಗಳನ್ನು ಕಂಡು ಅಚ್ಚರಿ, ವಿಸ್ಮಯ, ಹಿಗ್ಗು. ಆಕೆಯ ಬಯಕೆಗೆ ಯಾವ ಆತಂಕವೂ ಆಗದಂತೆ ವೀರಯ್ಯ ನವರು ಎಚ್ಚರ ವಹಿಸಿದರು. ಮಾಸಗಳು ಕಳೆದಂತೆ ಆ

ಸಾಧ್ವಿ ಸಂಪೂರ್ಣ ಲಿಂಗಕಳೆಯುಳ್ಳವಳಾದಳು. ಗರ್ಭಕ್ಕೆ ಅಷ್ಟಮಾಸದಲ್ಲಿ ಗುರುವಿನಿಂದ ಲಿಂಗಧಾರಣೆ ವಿಧಿವತ್ತಾಗಿ ನಡೆಯಿತು.

ಜನನ-ಬಾಲ್ಯ-ವಿದ್ಯಾಭ್ಯಾಸ

ಮುಂದೆ ನವಮಾಸ ತುಂಬಿದ ನಂತರ ಶಾಲಿವಾಹನ ಶಕೆ ಹದಿನೇಳುನೂರ ಎಪ್ಪತ್ತೆರಡರ ಸಾಧಾರಣನಾಮ ಸಂವತ್ಸರ ಜೇಷ್ಠ ಕೃಷ್ಣಪಕ್ಷ ಷಷ್ಠಿ ಭಾನುವಾರದ ಬೆಳಗಿನ ಪೂಜೆ ಮುಗಿಸಿ ಲಿಂಗಧ್ಯಾನದಲ್ಲಿರುವಾಗಲೇ ಗೌರಮ್ಮ ನವರು ಗಂಡುಮಗುವಿಗೆ ಜನ್ಮ ನೀಡಿದರು. ಮಗು ದುಂಡು ದುಂಡಾಗಿ ಚೆಲುವಾಗಿತ್ತು. ತೇಜಃಪುಂಜ ಕಣ್ಣುಗಳು, ಅಗಲವಾದ ಮುಖ, ಎಣ್ಣೆಗೆಂಪಿನ ಮಿಂಚುವ ಮೈ, ನಗೆಯು ತುಂಬ ಶಿವಬೆಳಗ ತುಂಬಿಕೊಂಡಿರುವ ಈ ಮಗು ಜನನ ಸಮಯದಲ್ಲಿಯೇ ಅಲೌಕಿಕವೆಂದೆನಿಸಿತ್ತು. ಮಠ ಸಂತೋಷದ ಆಗರವಾಯಿತು.

ಹನ್ನೆರಡನೆಯ ದಿನ ಮತ್ತೆ ಮಗುವಿಗೆ ಗುರುವಿನಿಂದ ಲಿಂಗಧಾರಣೆ ನಡೆದು ಮುಂದೆ ಜಗದೋದ್ಧಾರಕನಾಗಲಿರುವ ಶಿಶುವನ್ನು ತೊಟ್ಟಿಲಲ್ಲಿಟ್ಟು ಗುರುಗಳು 'ಮಳೆಯಪ್ಪಯ್ಯ'ನೆಂದು ನಾಮಕರಣ ಮಾಡಿದರು.

ಎಲ್ಲ ಮಕ್ಕಳಂತೆ ಬೆಳೆಯದೆ ಈ ಮಗು ವಿಲಕ್ಷಣವಾದ ರೀತಿಯಲ್ಲಿ ಬೆಳೆಯಿತು....ತಾಯಿ ಶರಣರ ನಾಮಸ್ಮರಣೆ ಮಾಡುತ್ತ ಮೊಲೆಯೂಡಿದರೆ ಮಾತ್ರ ಮಳೆಯಪ್ಪಯ್ಯ ಹಾಲು ಕುಡಿಯುತ್ತಿದ್ದ. ಹಾಲು ಕುಡಿಯುತ್ತ ತಾಯಿ

ಕೊರಳಲ್ಲಿದ್ದ ಲಿಂಗದೊಂದಿಗೆ ಆಟವಾಡುತ್ತಿದ್ದ. ತೊಟ್ಟಿಲನ್ನು ತೂಗುವಾಗಲೂ ಆತನಿಗೆ ಅನುಭಾವಗೀತೆಗಳನ್ನೇ ಪಾಡಬೇಕು. ಕಿಲಕಿಲನೆ ನಗುತ್ತ ತೊಟ್ಟಿಲದ ನಾಗರದಲ್ಲಿ ಕೈಕಾಲು ಬಡಿಯುತ್ತ ಈಜುವ....ಆಡುವ....ಹೀಗೆ ಕೆಲ ಮಾಸಗಳು ಕಳೆದು ತೊಟ್ಟಿಲನ್ನೂ ಬಿಟ್ಟು ಮುಂಡಿಗಾಲೂರಿ ಮನೆಯ ತುಂಬ ಹರಿದಾಡತೊಡಗಿದ. ಆಗಂತೂ ಬೆಳಕಿನ ಮರಿಯೊಂದು ಮನೆಯನ್ನೆಲ್ಲ ಬೆಳಕಾಗಿಸುತ್ತ ಸಂಚರಿಸಿದ ಅನುಭವ ತಾಯಿಗೆ. ಕೆಲಕಾಲದನಂತರ ಗೋಡೆ ಹಿಡಿದು ನಡೆಯತೊಡಗಿದ....ತಾಯಿಯ ಸೆರಗು ಹಿಡಿದು 'ಅವ್ವ' ಎನ್ನುತ್ತ ಹಿಂದೆ ಹಿಂದೆ ನಡೆಯಲಾರಂಭಿಸಿದ....ಬಾಲ್ಯದಲ್ಲಿಯೇ ಅನುಭಾವಿಗಳ ಪದ್ಯಗಳನ್ನೆಲ್ಲ ತಾಯಿಯಿಂದ ಕೇಳಿ ಅರಗಿಸಿಕೊಂಡ. ತಂದೆ ತಾಯಿಗಳೊಂದಿಗೆ ತಾನೂ ಲಿಂಗಾರ್ಚನೆಗೆ ಕೂಡುವ.

ಐದು ವರ್ಷದವನಾದಾಗ ವಿಧಿವತ್ತಾಗಿ ಸರಸ್ವತಿಯ ಪೂಜೆಯನ್ನು ಮಾಡಿಸಿ ಅಯ್ಯನವರ ಪಾಠಶಾಲೆಗೆ ಕಳಿಸಿ ಬಂದರು ತಂದೆ ವೀರಯ್ಯನವರು. ಓಂ ನಮಃ ಶಿವಾಯ ಬರೆಸಿದರು ಗುರುಗಳು. ಹಲವಾರು ಸಲ ತಿದ್ದಿದ. ಗುರುಗಳು ಹೇಳದಿದ್ದರೂ ಪೂಜೆಯ ಸಮಯದಲ್ಲಿ ತಂದೆ ತಾಯಿಗಳು ಪಠಿಸುತ್ತಿದ್ದುದನ್ನು ಕೇಳಿದ್ದ ಅವನ ಬುದ್ಧಿಗೆ ಇದು ಮಂತ್ರವೆಂಬುದು ಹೊಳೆಯಿತು. ನಾಲ್ಕಾರು ದಿನಗಳಲ್ಲಿ ಆತನ ವಿದ್ಯಾಗುರುಗಳಿಗೂ ಹೊಳೆಯಿತು–ಈತ ಇತರ ಹುಡುಗರಂತಲ್ಲ ಎಂಬುದು. ಪೂರ್ವಜನ್ಮದ ಸಂಸ್ಕಾರಬಲ ಪಡೆದು ಬಂದಿರುವ ಈ ಮಗು ಅಸಾಧಾರಣ ವ್ಯಕ್ತಿಯಾಗುತ್ತಾನೆ ಎಂದುಕೊಂಡ ಅವರು, ಈತನನ್ನು ಪ್ರತ್ಯೇಕವಾಗಿ ತಮ್ಮ ಪಕ್ಕದಲ್ಲಿಯೇ ಕೂಡಿಸಿಕೊಂಡು ಕನ್ನಡ, ಸಂಸ್ಕೃತ ಎರ

ಡನ್ನೂ ಚೆನ್ನಾಗಿ ಕಲಿಸತೊಡಗಿದರು. ಆತನಿಗೆ ಕಲಿಸುವುದು ತಮ್ಮ ಭಾಗ್ಯವೆಂದೇ ತಿಳಿದರು. ಹೀಗೆಯೇ ಕೆಲವು ವರ್ಷ ಗಳು ಕಳೆದವು. ಕನ್ನಡ, ಸಂಸ್ಕೃತ ಭಾಷೆಗಳ ವ್ಯಾಕರಣ, ಕಾವ್ಯ ಓದಲಾರಂಭಿಸಿದ. ಆತನಿಗೆ ದಿನಗಳೆದಂತೆ ಅಲ್ಲಿ ಕಲಿ ಯುವುದು ಇನ್ನೇನೂ ಇಲ್ಲ ಎನ್ನಿಸತೊಡಗಿತು. ಆಗಲೇ ತಂದೆ ತಾಯಿಗಳು ಆತನಿಗೆ ಬಿದರೆಯ ಹಿರೇಮಠದ ಸದ್ಗುರು ಪಟ್ಟದಧಿಪತಿ ಪ್ರಭುಸ್ವಾಮಿಗಳಿಂದ ಅಯ್ಯಾಚಾರ ಮಾಡಿ ಸಿದರು.

ದೀಕ್ಷಾನಂತರ ಮಳೆಯಪ್ಪಯ್ಯ ಸಂಪೂರ್ಣ ಬೇರೆ ಯಾದ. ಆತ ಲೌಕಿಕರ ಸಹವಾಸವೇ ಬೇಡವೆನ್ನುವಂತೆ ವರ್ತಿಸತೊಡಗಿದ. ಬೆಳಗಿನ ಸ್ನಾನ ಪೂಜೆ ಮುಗಿಸಿಕೊಂಡು ಊರ ಹೊರಗಿದ್ದ ಹಿರಿಯ ಕಲ್ಬೆಟ್ಟದಲ್ಲಿರುವ ಗವಿಯಲ್ಲಿ ಸ್ವಸ್ತಪದ್ಮಾಸೀನನಾಗಿ ಕುಳಿತು ಕರದಲ್ಲಿ ಲಿಂಗವನ್ನಿರಿಸಿ ಕೊಂಡು ಅದೆಷ್ಟೋ ಕಾಲ ದೃಷ್ಟಿಯೋಗದಲ್ಲಿ ಕಳೆಯು ತ್ತಿದ್ದ. ಅದು ಬಹಳ ದಿನಗಳವರೆಗೂ ಯಾರಿಗೂ ಗೊತ್ತಾ ಗಲೇ ಇಲ್ಲ. ಕೊನೆಗೊಮ್ಮೆ ಗೊತ್ತಾದಾಗ ತಂದೆ ತಾಯಿ ಅಕ್ಕ ಈತ ನಮಗಿನ್ನು ದಕ್ಕುವುದಿಲ್ಲವೆಂದು ಚಿಂತಿತರಾದರು. ಆಗಲೇ ಅಕ್ಕ ತನ್ನ ಮಗಳನ್ನು ತಮ್ಮನಿಗೆ ಕೊಟ್ಟು ಮದುವೆ ಮಾಡಿದರೆ ಆತ ತಮ್ಮೊಂದಿಗೆ ಉಳಿಯಬಹುದೆಂದಾಶಿಸಿ ತಂದೆತಾಯಿಗಳೊಂದಿಗೆ ಆ ಕಾಲದ ಪರಮತಪಸ್ವಿಗಳಾಗಿದ್ದ ಶಿವಲಿಂಗಸ್ವಾಮಿಗಳಲ್ಲಿಗೆ ಬಂದು ಈ ವಿಷಯವನ್ನು ಪ್ರಸ್ತಾ ಪಿಸಿದಳು. ಮಳೆಯಪ್ಪಯ್ಯನನ್ನು ಸರಿಯಾಗಿ ತಿಳಿದು ಕೊಂಡಿದ್ದ ಮಹಾಸ್ವಾಮಿಗಳು "ಮಗಳೆ, ನಿನಗೆ ಈ ಆಶೆ ಬೇಡ. ನಿನ್ನ ಈ ಆಶೆ ಈಡೇರದು. ಮಳೆಯಪ್ಪಯ್ಯ ತಮ್ಮ ಮಗನೆಂಬ ಮೋಹವನ್ನು ಈ ತಂದೆ ತಾಯಿಗಳೂ ಹಾಗೂ ಆತ ನಿನ್ನ

ತಮ್ಮನೆಂಬ ಮೋಹವನ್ನು ನೀನೂ ಬಿಟ್ಟುಬಿಡಬೇಕು. ಮುಳೆಯುಪ್ಪಯ್ಯ ಅಸಾಧಾರಣ ಶಿವಯೋಗಿ ಆಗಲಿದ್ದಾನೆ. ಆತನ ಬದುಕು ಕೇವಲ ನಿಮಗಷ್ಟೇ ಅಲ್ಲ, ಸಮಸ್ತ ನಾಡಿಗೇ ಮೀಸಲಾಗಿದೆ. ಆತ ವಿಶ್ವಕುಟುಂಬಿಯಾಗಲಿದ್ದಾನೆ. ಆತನನ್ನು ಆತನ ದಾರಿಯಲ್ಲಿ ಬಿಟ್ಟು ಬಿಡಿ" ಎಂದಾಗ ಎಲ್ಲರಿಗೂ ಒಮ್ಮೆಲೇ ಅಚ್ಚರಿ, ದುಃಖ, ಸುಖ. ಮಗ ತಮಗಿಲ್ಲವೆಂಬ ದುಃಖವಾದರೆ ತಮ್ಮ ಮಗ ಶಿವಯೋಗಿಯಾಗಲಿದ್ದಾನೆಂಬ ತಪಸ್ವಿಗಳ ಮಾತು ಸುಖವನ್ನೀಯುತ್ತದೆ. ಗುರುಗಳಿಗೆ ಸಾಷ್ಟಾಂಗವೆರಗಿ ಬಂದ ಅವರು ಅಂದಿನಿಂದ ಮುಳೆಯುಪ್ಪಯ್ಯನನ್ನು ಸಂಪೂರ್ಣವಾಗಿ ಆತನ ದಾರಿಯಲ್ಲಿ ಬಿಟ್ಟುಬಿಟ್ಟರು.

ಬಹಳ ಕಾಲ ಆ ಚಿಕ್ಕ ವಯಸ್ಸಿನಲ್ಲಿಯೇ ಆತ ಕಟುತರವಾದ ತಪಸ್ಸನ್ನು ಆಚರಿಸಿದ. ಜ್ಞಾನ ಸಂಪಾದನೆಯ ಆಶೆ ಅವನಲ್ಲಿ ಬಲವತ್ತರವಾಯಿತು. ಆ ಕಾಲದಲ್ಲಿ ಬಳ್ಳಾರಿಯಲ್ಲಿ ಓರ್ವ ಶರಣರಿದ್ದರು. ಅವರ ಪುಣ್ಯನಾಮ ಕರಡೆಪ್ಪ. ಅವರನ್ನೆಲ್ಲರೂ ಶರಣರೆಂದೇ ಕರೆಯುತ್ತಿದ್ದರು. ಅವರು ಜಿಜ್ಞಾಸುಗಳಾಗಿ ಬಂದ ವೀರಶೈವ ವಟುಗಳಿಗೆ ಊಟ, ವಸತಿ, ಸಂಸ್ಕೃತ ಪಾಠಶಾಲೆಯ ವ್ಯವಸ್ಥೆ ಮಾಡಿದ್ದರು. ಪಾಠಶಾಲೆಯಲ್ಲಿ ಆ ಕಾಲದ ಘನ ವಿದ್ವಾಂಸರು ಅಧ್ಯಾಪಕರಾಗಿದ್ದರು. ಈ ಪಾಠಶಾಲೆ ಹಾಗೂ ಅದನ್ನು ನಡೆಸತಕ್ಕಂಥ ಶರಣರ ಕೀರ್ತಿ ನಾಡಿನ ತುಂಬ ಹಬ್ಬಿತ್ತು. ಮುಳೆಯುಪ್ಪಯ್ಯನಿಗೂ ಅಲ್ಲಿಗೆ ಹೋಗಬೇಕೆನಿಸಿ ತನ್ನ ಗುರುಗಳಲ್ಲಿಗೆ ಬಂದು ತನ್ನ ಅಭಿಲಾಷೆ ತಿಳಿಸಿದಾಗ ಗುರುಗಳು, 'ಈ ಪಾಠಶಾಲೆಯಲ್ಲಿ ವೇದ, ಉಪನಿಷತ್ತು, ಸಾಹಿತ್ಯ, ಸಂಗೀತ, ತರ್ಕಶಾಸ್ತ್ರ ಎಲ್ಲವನ್ನೂ ಕಲಿಸುವ ಉದ್ದಾಮ ಪಂಡಿತರಿದ್ದಾರೆ.

ಈ ಪಾಠಶಾಲೆಯಲ್ಲಿ ಓದಲು ಬರುವ ವಟುಗಳ ಚಾರಿತ್ರ್ಯ, ವರ್ತನೆಗಳನ್ನೆಲ್ಲ ಪರೀಕ್ಷಿಸಿ ಪಾಠಶಾಲೆಗೆ ಸೇರಿಸಿಕೊಳ್ಳುವುದು ಪರಿಪಾಠ. ನೀನು ಅಲ್ಲಿಗೆ ಹೋಗು. ನೀನು ಬಯಸಿದ ವಿದ್ಯೆ ಅಲ್ಲಿ ದೊರೆಯುತ್ತದೆ. ಗುರುಲಿಂಗ ಜಂಗಮದ ಪರಮ ಆರಾಧಕನಾದ ಶರಣ ಕರಡೀಶ ನಿನ್ನನ್ನು ಎಲ್ಲ ರೀತಿಯಲ್ಲಿ ಒಪ್ಪಿ ಆದರಿಸುತ್ತಾನೆ" ಎಂದು ಹೇಳಿದಾಗ ಮಳೆಯಪ್ಪಯ್ಯ ನಿಗೆ ಎಲ್ಲಿಲ್ಲದ ಸಂತಸ.

ಬಳ್ಳಾರಿಗೆ ಪಯಣ

ತಂದೆ ತಾಯಿ ಅಕ್ಕ ಅಣ್ಣ ಬಂಧು ಬಾಂಧವರ ಅಕ್ಕರೆ, ಮೋಹಗಳನ್ನೆಲ್ಲ ತೊರೆದು ಕಾಯದಲ್ಲಿ ಕಳವಳವಿಲ್ಲದೆ, ಪ್ರಾಣದಲ್ಲಿ ಮಾಯೆಯಿಲ್ಲದೆ, ಬಳ್ಳಾರಿಗೆ ವ್ಯಾಪಾರಕ್ಕೆ ಹೋಗುತ್ತಿದ್ದ ಊರವರೊಂದಿಗೆ ಒಂದು ಸುಮುಹೂರ್ತ ದಲ್ಲಿ ಹೊರಟೇಬಿಟ್ಟ ಮಳೆಯಪ್ಪಯ್ಯ. ಹೀಗೆ ಹೊರಟ ಮಳೆಯಪ್ಪಯ್ಯ ಬಳ್ಳಾರಿ ತಲುಪಿ ಶರಣ ಕರಡೆಪ್ಪನವರನ್ನು ಕಂಡ. ಈ ವಟುವನ್ನು ನೋಡಿದಾಕ್ಷಣವೇ ಶರಣರಿಗೆ ಅದೇನೋ ಆಕರ್ಷಣೆ, ವಾತ್ಸಲ್ಯ. ಹೇಳಲುಬಾರದ ಅವುದೋ ಸಂತೋಷ. ಆತನ ತೇಜಃಪುಂಜ ಕಣ್ಣುಗಳಲ್ಲಿ ಶಿವಲಿಂಗದ ದರ್ಶನವಾಯಿತು ಶರಣರಿಗೆ. ಮೊದಲ ನೋಟ ದಲ್ಲಿಯೇ ಶರಣರಿಗೆ ಈ ವಟು ಎಲ್ಲರಂತಲ್ಲ ಎಂಬುದು ಖಚಿತ ವಾಯಿತು. ಅವರ ಈ ಅನಿಸಿಕೆ ಮುಂದೆ ನಿಜವೂ ಆಯಿತು.

"ಎಲ್ಲಿಂದ ಬಂದಿರಿ ?"

"ಸಸಿವಾಳದಿಂದ. ಅಲ್ಲಿಯ ಹಿರೇಮಠದ ಮಾಹೇಶ್ವರ

ಹೆಚ್ಚೆಚ್ಚು ಜ್ಞಾನ ಸಂಪಾದಿಸುವ ಆಶೆಯಿಂದ ಇಲ್ಲಿಗೆ ಬಂದಿರುವೆ ಶರಣರೆ. ತಮ್ಮ ಧವಳಕೀರ್ತಿಯನ್ನು ನನ್ನ ಗುರುಗಳ ಮುಖದಿಂದ ಕೇಳಿದೆ. ಆ ಶ್ರೀಗುರುವಿನ ಆಣತಿಯು ಎನ್ನ ತಲೆಯಲ್ಲಿ ಹೊತ್ತು ಇಲ್ಲಿಗೆ ಬಂದಿರುವೆ. ತಾವು ಮನಸ್ಸು ಮಾಡಬೇಕು."

"ಅದು ಪಾಠಶಾಲೆಯ ಪುಣ್ಯ. ತಮ್ಮಂಥ ತೇಜಸ್ವಿ ವಟು ಈ ಪಾಠಶಾಲೆಯಲ್ಲಿ ಕಲಿಯಲು ಬಂದುದು ಪರಮ ಭಾಗ್ಯ. ಇಲ್ಲಿಯ ಛತ್ರದಲ್ಲಿ ಪ್ರಸಾದ ಪಡೆದು, ಇಲ್ಲಿಯ ವಸತಿಗೃಹದಲ್ಲಿದ್ದು ಅಭ್ಯಾಸ ಮಾಡಬಹುದು."

"ಅದು ನನ್ನ ನಡೆಯಲ್ಲ. ಊರ ಹೊರಗಿರುವ ತೋಟದಲ್ಲಿ ಪರ್ಣ ಕುಟೀರವೊಂದನ್ನು ಹಾಕಿಕೊಂಡು ನಾನು ಇರುತ್ತೇನೆ. ಆದರ ಬಗ್ಗೆ ತಾವು ಯೋಚಿಸಬೇಡಿ. ನನಗೆ ಪ್ರವೇಶ ನೀಡಿದಿರಲ್ಲ; ಸಾಕು. ಬರುವೆ."

"ತಮ್ಮ ಇಷ್ಟ. ಶಿವನಿಚ್ಛೆ, ಶರಣು."

"ಶರಣು."

ಅಧ್ಯಯನ, ಸಾಧನೆ, ಸಿದ್ಧಿ

ಮುಳೆಯಪ್ಪಯ್ಯನವರು ತಾವು ಶರಣರಿಗೆ ಹೇಳಿದಂತೆ ಊರ ಹೊರಗೆ–ತಾವು ಬಳ್ಳಾರಿ ಪಟ್ಟಣ ಪ್ರವೇಶಿಸುವಾಗಲೇ ನೋಡಿ ಆಗಲೇ ಮನದಲ್ಲಿ 'ಇಲ್ಲಿದ್ದು ಸಾಧನೆ ಮಾಡಬೇಕು' ಎಂದುಕೊಂಡಿದ್ದ–ತೋಟದಲ್ಲಿ ತಾವೇ ಪರ್ಣ ಕುಟೀರವೊಂದನ್ನು ನಿರ್ಮಿಸಿಕೊಂಡರು.

ತೋಟದಲ್ಲಿ ಬಾವಿಯಿತ್ತು. ಪತ್ರಿಪುಷ್ಪಗಳು ಬೇಕಾ

ದಷ್ಟು. ಮೂರು ಹೊತ್ತೂ ಸ್ನಾನ, ಲಿಂಗಪೂಜೆ. ಬೆಳಗಿನ ಪೂಜೆ ಧ್ಯಾನ ಮುಗಿಸಿ ಪಾಠಕ್ಕೆ ಹೋಗುವುದು, ಅಲ್ಲಿಂದ ಬಂದು ಮಧ್ಯಾಹ್ನ ಸ್ನಾನ ಲಿಂಗಪೂಜೆ, ಧ್ಯಾನ ಮುಗಿಸಿ ಕಂತೆ ಭಿಕ್ಷೆಗೆ ಹೋಗುತ್ತಿದ್ದರು. ಐದು ಮನೆಯ ಕಂತೆ ಭಿಕ್ಷೆ ಮಾಡಿಕೊಂಡು ಬಂದು ಲಿಂಗಯ್ಯನಿಗೆ ಎಡೆ ಮಾಡಿ, ಪ್ರಸಾದ ಸ್ವೀಕರಿಸುತ್ತಿದ್ದರು. ಮತ್ತೆ ಅಭ್ಯಾಸ. ವೇದ, ಉಪನಿಷತ್ತು, ವಚನ ಸಾಹಿತ್ಯ ನಿಜಗುಣರ ಎಲ್ಲ ಕೃತಿಗಳ ಅಧ್ಯಯನವನ್ನು ಪೂರ್ಣಗೊಳಿಸಿದರು. ಸದಾಕಾಲ ಅಭ್ಯಾಸ, ಧ್ಯಾನ, ಪ್ರಾಣಾಯಾಮ. ಯಾವಾಗಲೂ ತಪಸ್ಸು. ತಮ್ಮ ಮುಂದಿನ ಮಹಾ ಬದುಕಿಗೆ, ತಮ್ಮ ಕಾಯ, ಮನ, ಬುದ್ಧಿ, ಚಿತ್ತ ಎಲ್ಲವನ್ನೂ ಅಗುಮಾಡಿಕೊಳ್ಳುತ್ತಿದ್ದರು. ಯಾರೊಂದಿಗೂ ಬೆರೆಯುತ್ತಿರಲಿಲ್ಲ. ಕಠಿಣತರವಾದ ತಪಸ್ಸನ್ನು ಎಳೆ ಹರೆಯದಲ್ಲಿಯೇ ಆರಂಭಿಸಿದ ಮಳೆಯಪ್ಪಯ್ಯನವರು ಲಿಂಗದ ಆಚರಣೆಯ ಆಳವಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಎಲ್ಲ ಭೋಗಗಳನ್ನು ಲಿಂಗ ಮುಖಗಳಿಗೆ ಅರ್ಪಿಸಿ ಲಿಂಗೇಂದ್ರಿಯರಾಗಿದ್ದರು. ಸುಚಿತ್ತ, ಸುಬುದ್ಧಿ, ಸುಮನ, ಸುಜ್ಞಾನಗಳು ಬಂದು ಅವರನ್ನು ಮುತ್ತಿದವು. ಲಿಂಗವನ್ನೇ ನಚ್ಚಿದ್ದರು, ಲಿಂಗವನ್ನೇ ನಂಬಿದ್ದರು ಅವರು. ಯಾರನ್ನೂ ಯಾಚಿಸಲಿಲ್ಲ. ಯಾರಿಗೂ ಹೊರೆಯಾಗಲಿಲ್ಲ. ಸಕ್ಕರಿ ಕರಡೆಪ್ಪ ಶರಣರಿಗೆ ಯಾವಾಗಲೂ ಮಳೆಯಪ್ಪಯ್ಯನವರದೇ ಯೋಚನೆ. ಏನಾದರೂ ಮಾಡಿ ಈ ವಟು ಶ್ರೇಷ್ಠನನ್ನು ಮನೆಯಲ್ಲಿಯಾದರೂ ತಂದಿಟ್ಟುಕೊಳ್ಳಬೇಕು ಈ ಜಂಗಮ ಮಹಿಮಾಪುರುಷನಾಗಲಿದ್ದಾನೆಂಬುದು ಅವರಿಗೆ ಮನವರಿಕೆಯಾಗಿತ್ತು. ಒಮ್ಮೆ ಮಳೆಯಪ್ಪಯ್ಯನವರ ಪರ್ಣಕುಟೀರಕ್ಕೆ ಶರಣರು ಬಂದರು.

ಬಂದ ಶರಣರು ಪರ್ಣಕುಟೀರದಲ್ಲಿಯ ನಿತಾಂತ ಶಾಂತಿಯನ್ನು, ಧ್ಯಾನಾಸಕ್ತರಾಗಿರುವ ಜಂಗಮ ವಟುವನ್ನು ಕಂಡು ಮೂಕರಾದರು. ಸಾಷ್ಟಾಂಗವೆರಗಿ ಭಯಭಕ್ತಿಗಳಿಂದ ಶರಣರು ಕುಳಿತರು. ಧ್ಯಾನ ಮುಗಿಸಿ ಕಣ್ಣುಗಳ ಎವೆ ಆರೆದೆರೆದಾಗ ಎದುರಿಗೆ ಕರಡೆಪ್ಪ ಶರಣರು. ಒಮ್ಮೆಲೇ ಮಳೆಯಪ್ಪಯ್ಯನವರು ಕೇಳಿದರು:—

"ಇದೇನು ಶರಣರು ಇಲ್ಲಿ ? ಬಂದು ಬಹಳ ಹೊತ್ತಾಯಿತೇ ?"

"ಇಲ್ಲ ಸ್ವಾಮಿ. ಈ ಕಣ್ಣುಗಳು ಪಾವನಗೊಂಡವು. ಈ ನೆಲ ಪಾವನವಾಯಿತು. ಬಳ್ಳಾರಿಯ ಭಾಗ್ಯ!"

"ಬಹಳ ದೊಡ್ಡ ಹೊರೆ ಹೊರಿಸುತ್ತಿರುವಿರಿ ಈ ಬಾಲಕನ ಮೇಲೆ. ಶರಣರು ಮೆಟ್ಟಿದ ಧರೆ ಪಾವನವಯ್ಯ ಎಂದು ಪುರಾತನರೇ ಹೇಳಿದ್ದಾರೆ. ಬಳ್ಳಾರಿಯ ಭಾಗ್ಯ ತಾವು ಶರಣರೇ. ತಮ್ಮ ಬೆಳಕಿನಲ್ಲಿ ಅಸಂಖ್ಯಾತರ ಬದುಕು ಬೆಳಗುತ್ತಲಿದೆ."

"ಇಲ್ಲ ಬುದ್ಧಿ. ತಾವು ನನ್ನ ಯಾವುದೋ ಜನುಮದ ಪುಣ್ಯದ ಪುಂಜವಾಗಿ ಇಲ್ಲಿಗೆ ದಯಮಾಡಿಸಿದ್ದೀರಿ. ಈ ತೊತ್ತಿಗೆ ಜಂಗಮ ಸೇವೆಯ ಭಾಗ್ಯ ದಯಪಾಲಿಸಬೇಕು. ತಾವು ಇನ್ನು ಮೇಲೆ ನಮ್ಮ ಮನೆಯಲ್ಲಿಯೇ ಇರಬೇಕು. ತಮ್ಮ ಪೂಜೆಗೆ, ಧ್ಯಾನಕ್ಕೆ ಎಲ್ಲ ಅನುಕೂಲವೂ ಅಲ್ಲಿದೆ. ಇಲ್ಲವೆನ್ನಬೇಡಿ. ನನ್ನನ್ನು ನಿರಾಶೆಗೊಳಿಸಬೇಡಿ" ಎಂದು ಕೇಳಿಕೊಂಡರು ಶರಣರು.

ಭಕ್ತನ ಕರೆ ಅವರ ಮನಸ್ಸನ್ನು ಕರಗಿಸಿತ್ತು. ಅವರಿಗೆ ಮನಸ್ಸಿಲ್ಲದಿದ್ದರೂ ಆವರೆವಿಗೂ ಆ ಶರಣರು ಮಾಡಿದ ಗುರುಲಿಂಗ ಜಂಗಮದ ಸೇವೆಯನ್ನು ಮೆಚ್ಚಿದ ಮಳೆಯಪ್ಪ

ಯ್ಯನವರು ಹೋಗಲೊಪ್ಪಿದರು. ಆಗ ಕರಡೆಪ್ಪನವರು ಶಿವಸಾಯುಜ್ಯ ಸನ್ನಿಹಿತವಾದಷ್ಟು ಸಂತಸಪಟ್ಟರು. ಅವರಿಗೆ ಶಿವನಿಧಿಯೇ ಸಿಕ್ಕಿದಂತಾಯಿತು. ಮನೆಗೆ ಅತೀವ ಉತ್ಸಾಹ ದಿಂದ ಜಂಗಮದೇವರನ್ನು ಕರೆತಂದರು. ಅಂದಿನಿಂದ ಅವರ ಸೇವೆಗಾಗಿ ಇಡೀ ಮನೆಯುವರೆಲ್ಲ ನಿಂತರು. ಯಾವುದಕ್ಕೂ ಕೊರತೆಯಿಲ್ಲ. ಮಳೆಯಪ್ಪನವರ ಲಿಂಗಾನುಷ್ಠಾನ ಏಕ ಮುಖವಾಗಿ ಸಾಗಿತು. ಈಗ ಅವರು ಪಾಠಶಾಲೆಯಲ್ಲಿ ಓದು ವುದು ಏನೂ ಇರಲಿಲ್ಲ. ಕೇವಲ ಲಿಂಗದೊಡನೆ ಅವರ ಮಾತು, ಲಿಂಗದೊಡನೆ ಸಂಭಾಷಣೆ, ಸುತ್ತು ಹತ್ತುಕಡೆ ವಿರಕ್ತಿಯ ಕೀರ್ತಿ.

'ಸಹಸ್ರದಳ ಕಮಲದಲ್ಲಿಪ್ಪ ಶಿವಲಿಂಗಕ್ಕೆ ನೇತ್ರಗಳ ಮುಖ ಮಾಡಿ ರೂಪಿನ ನೈವೇದ್ಯವ ಅರ್ಪಿಸುವ' ಸಾಹಸ ದಲ್ಲಿ ಅವರು ವಿಜಯಿಯಾಗಿದ್ದರು. ಇವರ ವಿರತಿಯ ಸುಗಂಧ ಹತ್ತೂಕಡೆ ಪಸರಿಸಲಾರಂಭಿಸಿ ನಾಡಿನ ದೊಡ್ಡ ದೊಡ್ಡ ಮಠಗಳ ಅಧಿಪತಿಗಳು, ತಮ್ಮ ಮಠಕ್ಕೆ ಇವರನ್ನು ಉತ್ತರಾಧಿಕಾರಿಯಾಗಿ ತಂದುಕೊಳ್ಳಬೇಕೆಂದು ಹಂಬಲಿಸಿ, ಕರಡೆಪ್ಪನವರಲ್ಲಿಗೆ ತಮ್ಮ ತಮ್ಮ ಭಕ್ತರನ್ನು ಕಳಿಸ ಲಾರಂಭಿಸಿದರು. ಆದರೆ ಈ ವಿರಾಗಿ ಯಾವ ಮಠವನ್ನೂ ಒಲ್ಲೆನೆಂದು ಕಡಾಖಂಡಿತವಾಗಿ ಹೇಳಿಬಿಡುತ್ತಿದ್ದರು. ಒತ್ತಾಯಿಸಲು ಎಲ್ಲರೂ ಹೆದರುತ್ತಿದ್ದರು. ಒಳಒಳಗೆ ಕರಡೆಪ್ಪನವರಿಗೆ ಸಂತೋಷವಾಗುತ್ತಿತ್ತು ; ಅವರೊಪ್ಪದೆ ಇದ್ದುದಕ್ಕೆ. ಸ್ವಾಮಿಗಳು ಅವರ ಪಾಲಿಗೆ ಪ್ರಾಣಸದೃಶ ರಾಗಿದ್ದರು.

ಈ ಸಮಯದಲ್ಲಿಯೇ ಚಿತ್ತರಗಿ ಪೀಠದ ಅಧಿಪತಿ ಗಳಾಗಿದ್ದ ಪರಮ ತಪೋನಿಧಿ ಶ್ರೀಮನ್ನಿರಂಜನಪ್ರಣವ

ಸ್ವರೂಪಿಗಳಾದ ಶ್ರೀ ಗುರುಮಹಾಂತ ಶಿವಯೋಗಿಗಳು ತಮ್ಮ ಶಿಷ್ಯರಾದ ಶ್ರೀಮದ್ದಾನೇಶ್ವರ ಸ್ವಾಮಿಗಳಿಗೆ ಮಠದ ಎಲ್ಲ ಹಿರಿಯತನ ನೀಡಿ ಲಿಂಗೈಕ್ಯರಾದರು. ಈ ಪೀಠ ಬಹು ಪುರಾತನವಾದರೂ ನಮಗೆ ಕೇವಲ ಐದಾರು ನೂರು ವರುಷಗಳ ಚರಿತ್ರೆ ಮಾತ್ರ ಲಭ್ಯವಾಗಿದೆ. ಈಗ ಸಿಕ್ಕಿರುವ ಚರಿತ್ರೆಯ ಆಧಾರದಿಂದ ಹೇಳುವುದಾದರೆ ಆ ಪೀಠದ ಮೊದಲ ಸ್ವಾಮಿಗಳು ವಿಜಯಮಹಾಂತಸ್ವಾಮಿಗಳು. ಅವರು ಕೂಡ ಮಹಾಮಹಿಮಶಾಲಿಗಳೂ, ಶಾಪಾನುಗ್ರಹಶಕ್ತಿಯನ್ನು ಪಡೆದವರಾಗಿದ್ದರೆಂದೂ ತಿಳಿದುಬರುತ್ತದೆ. ಅವರ ನಂತರ ಬಂದವರು ರೇವಣಸಿದ್ಧಸ್ವಾಮಿಗಳು, ಶಿವಲಿಂಗ ಸ್ವಾಮಿಗಳು, ಪುಟ್ಟಬಸವಲಿಂಗ ಸ್ವಾಮಿಗಳು, ದಿಗಂಬರ ಚೆನ್ನಬಸವ ಸ್ವಾಮಿಗಳು, ಬಸವಲಿಂಗ ಸ್ವಾಮಿಗಳು, ಚನ್ನಮಲ್ಲ ಸ್ವಾಮಿಗಳು, ಕೆಂಪಿನ ಬಸವಲಿಂಗ ಸ್ವಾಮಿಗಳು, ಹಿರಿಯ ಮಹಾಂತಸ್ವಾಮಿಗಳು, ಮರಿಮಹಾಂತ ಸ್ವಾಮಿಗಳು ಮುಂತಾದ ಹದಿನೈದು ಜನ ಮಹಾಸ್ವಾಮಿಗಳು ಈ ನಿರಂಜನ ಪೀಠದ ಅಧಿಪತಿಗಳಾಗಿದ್ದರು. ಈಗ ಗುರುಮಹಾಂತ ಶಿವಯೋಗಿಗಳು ಲಿಂಗೈಕ್ಯರಾದುದರಿಂದ ಆ ಮಠದ ಎಲ್ಲ ಜವಾಬ್ದಾರಿಯನ್ನು ಪೂಜ್ಯ ಶ್ರೀಗಳು ತಾವು ಲಿಂಗೈಕ್ಯರಾಗುವ ಪೂರ್ವದಲ್ಲಿ ಶ್ರೀಮದ್ದಾನೇಶ್ವರರಿಗೆ ನೀಡಿದ್ದರು. ಚಿತ್ತರಗಿ ಪೀಠದ ಸಮಸ್ತ ಭಕ್ತರು ಕೂಡ ಶ್ರೀಮದ್ದಾನೇಶ್ವರರೇ ಆ ಪೀಠದ ಅಧಿಪತಿಗಳಾಗಬೇಕೆಂದು ಬಯಸಿದರು. ಆದರೆ ಶ್ರೀಮದ್ದಾನೇಶ್ವರರು ಆ ಪೀಠಕ್ಕೆ ತಾವು ಅಧಿಪತಿಗಳಾಗದೆ ಓರ್ವ ಶಿವಯೋಗಿಪುಂಗವನನ್ನು ತಂದು ಕೂಡಿಸಬೇಕೆಂದು ಸಂಕಲ್ಪ ಮಾಡಿದ್ದರು.


ಚಿತ್ತರಗಿ ಪೀಠ ಸಣ್ಣಪುಟ್ಟ ಪೀಠವಲ್ಲ. ಬಹುದೊಡ್ಡ



ಪರಮಶಿವಯೋಗಿ ಲಿಂ.ಶ್ರೀ ಮ.ನಿ.ಪ್ರ. ವಿಜಯಮಹಾಂತ ಶಿವಯೋಗಿಗಳು




ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನ ಮಠ, ಇಲಕಲ್ಲ



ಶ್ರೀ ವಿಜಯಮಹಾಂತ ಶಿವಯೋಗಿಗಳು ಮಠದ ತೋಟದಲ್ಲಿ
ಧ್ಯಾನಾಸಕ್ತರಾಗಿ ಮುಹೂರ್ತ ಮಾಡುತ್ತಿದ್ದ ಸ್ಥಳ




ತಮ್ಮ ನೆಚ್ಚಿನ ಮಹಾಂತಮ್ಮ (ಹಸು) ನೊಂದಿಗೆ ಲಿಂ. ಶ್ರೀ ಮ.ನಿ.ಪ್ರ. ವಿಜಯಮಹಾಂತ
ಶಿವಯೋಗಿಗಳು (ಒಂದು ತೈಲ ಚಿತ್ರ)



ಶ್ರೀ ವಿಜಯಮಹಾಂತ ಶಿವಯೋಗಿಗಳು ಉಪಯೋಗಿಸುತ್ತಿದ್ದ ಕ್ರಿಯಾಭಸ್ಮ,
ಆವುಗೆ, ಚಾಳೀಸು.



ಲಿಂ. ಶ್ರೀ ವಿಜಯಮಹಾಂತ ಶಿವಯೋಗಿಗಳ ಗುರುಗಳಾದ
ಲಿಂ. ಶ್ರೀ ಗುರುಮಹಾಂತ ಸ್ವಾಮಿಗಳ ಗದ್ದುಗೆ, ಇಲಕಲ್ಲ



ಲಿಂ. ಶ್ರೀ ಮ.ನಿ.ಪ್ರ. ವಿಜಯಮಹಾಂತ ಶಿವಯೋಗಿಗಳ ಗದ್ದುಗೆ



ಗುರುಗಳಾದ ಲಿಂ. ಶ್ರೀ ಮ.ನಿ.ಪ್ರ. ಶ್ರೀ ಗುರುಮಹಾಂತ ಸ್ವಾಮಿಗಳ ಹಾಗೂ ಲಿಂ.ಶ್ರೀ ಮ.ನಿ.ಪ್ರ.
ಶ್ರೀ ವಿಜಯಮಹಾಂತ ಶಿವಯೋಗಿಗಳ ಗದ್ದುಗೆ, ಇಲಕಲ್ಲ



ಲಿಂ. ಶ್ರೀ ಮ.ನಿ.ಪ್ರ. ಶ್ರೀ ವಿಜಯಮಹಾಂತೇಶ್ವರ ರಥೋತ್ಸವ



ಜಾತ್ರೆಯ ಕಾಲದಲ್ಲಿ ಶ್ರೀ ವಿಜಯ ಮಹಾಂತ ಶಿವಯೋಗಿಗಳ ಭಾವಚಿತ್ರದ ಅಡ್ಡಪಲ್ಲಕ್ಕಿ ಉತ್ಸವ

ಸಂಸ್ಥಾನ ಮಠ, ದಾಸೋಹ ಮಠ, ಪೀಠದ ಶಾಖಾಮಠಗಳು ಒಂದಲ್ಲ, ಎರಡಲ್ಲ–ಅರವತ್ತಕ್ಕೂ ಮಿಕ್ಕಿದ್ದವು. ವಿಜಾಪುರ, ರಾಯಚೂರ ಹಾಗೂ ಧಾರವಾಡ ಜಿಲ್ಲೆಗಳ ತುಂಬ ಈ ಪೀಠದ ಶಾಖಾಮಠಗಳು ಹಬ್ಬಿವೆ. ಎಲ್ಲಕ್ಕೂ ಹೆಚ್ಚಾಗಿ ಬಹು ದೊಡ್ಡ ಪರಂಪರೆ ಇದೆ. ಹೀಗಿದ್ದೂ ಶ್ರೀಮದ್ದಾನೇಶ್ವರರು ಈ ನಿರಂಜನ ಪೀಠವೇರಲು ಒಪ್ಪದೆ ಓರ್ವ ಶಿವಯೋಗಿಗಾಗಿ, 'ಬಸವಣ್ಣನವರು ಶೂನ್ಯಪೀಠ ರಚಿಸಿಕೊಂಡು ಪ್ರಭುದೇವರಿಗಾಗಿ ಕಾದಂತೆ' ಈ ಶ್ರೀಗಳೂ ಕಾದರು.

ಬಳ್ಳಾರಿಯಲ್ಲಿದ್ದು ತಮ್ಮ ತಪಃ ಪ್ರಭಾವವನ್ನು ನಾಡಿನ ತುಂಬ ಪಸರಿಸುತ್ತಿದ್ದ ಶ್ರೀ ಮಳೆಯಪ್ಪಯ್ಯನವರ ಬಗ್ಗೆ ಪೂಜ್ಯ ಶ್ರೀಮದ್ದಾನೇಶ್ವರರಿಗೂ ತಿಳಿದು ಬಂದಿತು. ಅವರ ಅಂತರಾತ್ಮ ಈ ಪೀಠಕ್ಕೆ ಅವರೇ ಯೋಗ್ಯರೆಂದು ನುಡಿಯುತ್ತಲಿತ್ತು. ಆಗ ಶ್ರೀಗಳ ಅಪ್ಪಣೆಯ ಮೇರೆಗೆ ಪೀಠದ ಉತ್ತಾರಾಧಿಕಾರಿಯನ್ನು ಹುಡುಕುವ ಹೊಣೆಯು ಚಿತ್ತರಗಿ ಪೀಠದ ಪರಮಭಕ್ತರೂ, ಅಮರಾವತಿ ಸಂಸ್ಥಾನದ ಅಧಿಪತಿಗಳೂ ಆದ ಶ್ರೀರಾಮಪ್ಪ ದೇಸಾಯಿ ಅವರ ಪಾಲಿಗೆ ಬಿತ್ತು. ಅವರಿಗೆ ಬಳ್ಳಾರಿ ಆಚಿನ ನಾಡಾದ ಪುಂಗನೂರಲ್ಲಿ ಬಂಧುಗಳಿದ್ದರು. ಅವರು ಆಗಾಗ ಆ ಕಡೆಗೆ ಹೋಗುತ್ತಲಿರುವುದು ವಾಡಿಕೆಯಾಗಿತ್ತು. ಬಳ್ಳಾರಿಯಲ್ಲಿ ಶ್ರೀ ಕರಡೆಪ್ಪ ಶರಣರಲ್ಲಿದ್ದ ಈ ತಪಸ್ವಿ ಮಳೆಯಪ್ಪಯ್ಯನವರ ಬಗ್ಗೆ ಅವರಿಗೆ ತಿಳಿದಿತ್ತು. ಒಮ್ಮೆ ಪುಂಗನೂರಿನಿಂದ ಅಮರಾವತಿಗೆ ಬರುವಾಗ ಬಳ್ಳಾರಿಯಲ್ಲಿ ತಂಗಿ ಶರಣ ಕರಡೆಪ್ಪನವರನ್ನು ಕಂಡು ಅವರಲ್ಲಿದ್ದ ತಪಸ್ವಿ ಮಳೆಯಪ್ಪಯ್ಯನವರನ್ನು ಚಿತ್ತರಗಿ ಪೀಠದ ಅಧಿಪತಿಗಳಾಗಲು ಒಪ್ಪಿಸಬೇಕೆಂದು ಕೇಳಿಕೊಂಡರು. ಶರಣರು ಈಗ ಮನಸ್ಸು

ಮಾಡಿದರು. ಚಿತ್ತರಗಿ ಪೀಠದ ಶಿವಕೀರ್ತಿಯನ್ನೂ, ಅದರ ಸ್ವಾಮಿಂಗಳಾಗಿದ್ದವರ ಶಾಪಾನುಗ್ರಹಶಕ್ತಿಯನ್ನೂ ಶರಣರು ಕೇಳಿದ್ದರು. ಹೀಗಾಗಿ ಶ್ರೀರಾಮಪ್ಪ ದೇಸಾಯಿ ಅವರೊಂದಿಗೆ ಶರಣರೂ ಮಳೆಯಪ್ಪಯ್ಯನವರನ್ನು ಈ ಪೀಠದ ಅಧಿಕಾರ ವಹಿಸಿಕೊಳ್ಳಲು ಒತ್ತಾಯ ಮಾಡಿದರು. ಶ್ರೀಮಂತ ಶ್ರೀರಾಮಪ್ಪ ದೇಸಾಯಿ ಅವರಂತೂ ಸಾಷ್ಟಾಂಗ ಹಾಕಿದವರು ಏಳಲೇ ಇಲ್ಲ. ಇಷ್ಟಾದರೂ ಪರಮತೇಜೋಮೂರ್ತಿ ಒಪ್ಪಲಿಲ್ಲ. ಶ್ರೀ ದೇಸಾಯಿಯವರು ಎದ್ದು ಆ ಮಠದ ಎಲ್ಲ ಸಂಪತ್ತಿನ ಬಗ್ಗೆ, ಪರಂಪರೆಯ ಬಗ್ಗೆ, ವೈಭವದ ಬಗ್ಗೆ ಭಟ್ಟಂಗಿಗಳಂತೆ ಸಾರಿ ಸಾರಿ ಹೇಳಿದರು. ಆದರೆ ಅವರು ಇವೆಲ್ಲವನ್ನೂ ಮೀರಿದ ನಿಸ್ಸೀಮರಾಗಿದ್ದರು. ಶ್ರೀರಾಮಪ್ಪ ದೇಸಾಯರು ಕೊನೆಗೂ ನಿರಾಶೆಯಿಂದಲೇ ಸಂಸ್ಥಾನಕ್ಕೆ ಮರಳಿದರು. ಈ ಘಟನೆ ಶರಣ ಕರಡೆಪ್ಪನವರ ಮೇಲೆ ಬಹಳ ಪರಿಣಾಮ ಬೀರಿತು. ಮಳೆಯಪ್ಪಯ್ಯನವರ ವೀರ ವಿರಾಗತ್ವದ ಬಗ್ಗೆ ಅಭಿಮಾನ ಹೆಚ್ಚಿತಾದರೂ ಚಿತ್ತರಗಿ ಪೀಠದ ಅಧಿಕಾರ ವಹಿಸಿಕೊಳ್ಳಬೇಕಾಗಿತ್ತೆಂಬ ಆಸೆ ಅವರಲ್ಲಿ ಉಳಿದೇ ಉಳಿಯಿತು. ದೇಸಾಯರು ಹೋದ ಮೇಲೂ ಹಲವು ಸಲ ಶರಣರು ಮಳೆಯಪ್ಪಯ್ಯನವರೊಂದಿಗೆ:

"ಬುದ್ಧಿ, ತಾವು ಕೃಪೆ ಮಾಡಿ ದೇಸಾಯರ ಬೇಡಿಕೆ ಪೂರೈಸಬೇಕಾಗಿತ್ತು. ಆ ಪೀಠಕ್ಕೆ ತಮ್ಮನ್ನು ಬಿಟ್ಟರೆ ಬೇರಾರೂ ಇಲ್ಲ" ಎಂದರು.

"ಶರಣರೇ, ಅದು ಅಹಂಕಾರ. ಅಧಿಕಾರ, ಆಡಂಬರ, ಮೋಹ, ಕಟ್ಟು ಇವಾವೂ ನನಗೆ ಬೇಡವಾಗಿದೆ. ಹೀಗೆಯೇ ಇದ್ದು ಲಿಂಗಯ್ಯನ ಒಡನಾಟದಲ್ಲಿ ಕಾಲ ಕಳೆಯುವ ಆಸೆ

ನನಗೆ. ಮಠ, ಸಂಸ್ಥಾನ ಈ ಜಂಜಾಟದಲ್ಲಿ ನನ್ನನ್ನು ಹಾಕ ಬೇಡಿ."

"ಇಲ್ಲ ಬುದ್ಧಿ, ತಮ್ಮಂಥವರಿಂದ ಈ ನಾಡಿಗೆ ಹೆಚ್ಚಿನ ಕೀರ್ತಿ ಲಭಿಸಬೇಕಾಗಿದೆ. ಹೆಚ್ಚು ಜನಕ್ಕೆ ಒಳಿತಾಗಬೇಕಾ ಗಿದೆ. ಹೀಗಾಗಬೇಕಾದಾಗ ಒಂದು ಕಾರ್ಯಕ್ಷೇತ್ರ ಬೇಡವೇ? ನಾನು ಆ ದೃಷ್ಟಿಯಿಂದ ತಮ್ಮಲ್ಲಿ ಅರಿಕೆ ಮಾಡಿಕೊಂಡೆ. ತಾವು ಆಗ ಕೂಡ ಯಾವುದರ ಗೋಜಿಗೂ ಹೋಗದೆ ಲಿಂಗಾನುಷ್ಠಾನ, ತಪಸ್ಸು ಎಲ್ಲವನ್ನೂ ಮಾಡಬಹುದು. ಲೋಕಹಿತಕ್ಕಾಗಿ ಲೋಕ ಸಂಚಾರ ಕೈಕೊಳ್ಳಬಹುದು. ಮಹಾತಪಸ್ವಿಗಳ ಪರಂಪರೆ ಆ ಪೀಠಕ್ಕೆ ಇದೆ. ಅದು ಆದೇ ರೀತಿಯಲ್ಲಿ ಮುಂದುವರಿದುಕೊಂಡು ಬರಲಿ ಎಂಬುದು ಪೀಠದ ಸದ್ಭಕ್ತರ ಇಚ್ಛೆ. ತಾವು ಮನಸ್ಸು ಮಾಡಬೇಕು" ಎಂದು ಶರಣರು ಪ್ರಾರ್ಥಿಸಿದರು.

ಅದಕ್ಕೆ ಶ್ರೀ ಮಳೆಯಪ್ಪನವರು, "ಈಗಂತೂ ಬೇಡ ಶರಣರೆ. ಯಾಕೋ ಲಿಂಗಯ್ಯ ಒಪ್ಪುತ್ತಿಲ್ಲ; ನೋಡೋಣ. ಮುಂದೆ ಆತನ ಇಚ್ಛೆ ಹಾಗಿದ್ದರೆ ಹಾಗೇಯೇ ಆದೀತು. ನಾನು ಒಪ್ಪಲಿಲ್ಲವೆಂದು ನೀವು ಮನಸ್ಸಿಗೆ ಹಚ್ಚಿಕೊಳ್ಳ ಬೇಡಿ" ಎಂದು ಸಾಂತ್ವನಗೊಳಿಸಿದರು.

ಈ ಘಟನೆಯ ನಂತರ ಕೆಲಕಾಲ ಕಳೆಯಿತು. ಚಿತ್ತ ರಗಿ ಪೀಠ ಅಧಿಪತಿಗಳಿಲ್ಲದೆ ಹಾಗೆಯೇ ಇತ್ತು ಎನ್ನುವುದಕ್ಕಿಂತ ಈ ತಪಸ್ವಿಯ ಬರುವಿಗಾಗಿ ಅದೂ ತಪ ದಲ್ಲಿ ನಿರತವಾಗಿತ್ತು ಎಂದು ಹೇಳುವುದು ಉಚಿತ ವಾದುದು. ಮುಂದೆ ಕೆಲದಿನಗಳಲ್ಲಿ ತನ್ನ ಅಪಾರ ಭೃತ್ಯಾ ಚಾರದಿಂದ, ತನುಮನಧನಗಳಿಂದ ವೀರಶೈವಧರ್ಮದ ಸೇವೆಗೈಯುತ್ತಿದ್ದ ಮಹಾಶರಣರಾದ ಕರಡೆಪ್ಪನವರು

ಲಿಂಗೈಕ್ಯರಾಗಲು ಪಾಠಶಾಲೆ, ಛತ್ರಗಳೆಲ್ಲ ದಾನಿಯಿಲ್ಲದೆ ಮೆಲ್ಲಮೆಲ್ಲನೆ ಮುಚ್ಚಲಾರಂಭಿಸಿದವು. ಅಲ್ಲಿದ್ದ ಜಿಜ್ಞಾಸುಗಳು, ವಟುಗಳು, ತಮತಮಗೆ ಸಾಧ್ಯವಿದ್ದೆಡೆಗೆ ಹೊರಟು ಹೋದರು.

ಬಳ್ಳಾರಿಯಿಂದ ನರೇಗಲ್ಲಿಗೆ

ಆಗ ಮಳೆಯಪ್ಪಯ್ಯನವರೂ ಶರಣರಿಲ್ಲದ ಮನೆಯಲ್ಲಿ ನಿಲ್ಲದೆ ನರೇಗಲ್ಲ ಗ್ರಾಮಕ್ಕೆ ಬಂದು ಅಲ್ಲಿಯ ತೋಟವೊಂದರಲ್ಲಿ ಪರ್ಣಕುಟೀರ ನಿರ್ಮಿಸಿಕೊಂಡು ತಮ್ಮ ಲಿಂಗಾನುಸಂಧಾನದಲ್ಲಿ ತೊಡಗಿದರು. ಅವರು ಎಲ್ಲಿದ್ದರೂ ತ್ರಿಕಾಲ ಪೂಜೆ ನಿಲ್ಲಲಿಲ್ಲ. ಈಚೀಚೆ ಇಡೀ ದಿನ ಲಿಂಗದೊಂದಿಗೇ ಅವರ ಮಾತು, ಅವರ ಚರ್ಚೆ, ಸಲಿಗೆ. ಮಹಾದೇವಿಯಕ್ಕ ಹೇಳಿದ ಹಾಗೆ 'ಅಂಗೈಯ ಲಿಂಗದಲಿ ಕಂಗಳ ನೋಟಸ್ವಯವಾದ ಇರವು' ಅವರದಾಗಿತ್ತು.

ಅವರ ಅನುಷ್ಠಾನ ನರೇಗಲ್ಲ ತೋಟದಲ್ಲಿ ನಿರಾತಂಕವಾಗಿ ಕೆಲಕಾಲ ಸಾಗಿತ್ತು. ಲಿಂಗನಿಷ್ಠೆ, ಅಂಗಶ್ರದ್ಧೆ ಬೆಳೆದಂತೆಲ್ಲ 'ಆರೆಸಳ ಕಮಲದಲ್ಲಿ ತೋರುವ' ಲಿಂಗದೊಡನೆ ಮಾತನಾಡತೊಡಗಿದಾಗ ಬಳ್ಳಾರಿಯಲ್ಲಿ ಶರಣರು ಹಾಗೂ ಅಮರಾವತಿ ದೇಸಾಯಿ ಅವರ ನಡುವೆ ನಡೆದ ಮಾತು, ಅಂದಿನ ಘಟನೆ ಅದೇಕೋ ಎಲ್ಲ ಕಾಣಿಸಿಕೊಳ್ಳತೊಡಗಿತು. 'ಈ ಸಮಯ ಬಂತೆಂದು ತೋರುತಿದೆ. ಶರಣರ ಮನಸ್ಸು ನೋಯಿಸಬಾರದಾಗಿತ್ತು. ಲಿಂಗಮಹಾಂತೇಶ, ನಿನ್ನಿಚ್ಛೆಯುಂತಾಗಲಿ. ಶರಣರ ಇಚ್ಛೆ ಈಗ ಪೂರೈಸಬಹುದಾಗಿದೆ'

ಎಂದು ತಮ್ಮಷ್ಟಕ್ಕೆ ಲಿಂಗಯ್ಯನೊಂದಿಗೆ ಮಾತನಾಡಿ ಕೊಂಡರು. ಇದಾದ ಮಾರನೆಯ ದಿನವೇ ಅಮರಾವತಿ ಶ್ರೀರಾಮಪ್ಪ ದೇಸಾಯರ ಕನಸಿನಲ್ಲಿ ಬಳ್ಳಾರಿಯ ಕರಡೆಪ್ಪ ಶರಣರು ಕಾಣಿಸಿಕೊಂಡು "ಶ್ರೀ ಮಳೆಯಪ್ಪಯ್ಯನವರು ನರೇಗಲ್ಲ ತೋಟದಲ್ಲಿ ತಪದಲ್ಲಿದ್ದಾರೆ. ಈಗ ನೀವು ಹೋಗಿ ಬಿನ್ನಹ ಮಾಡಿಕೊಳ್ಳಿ. ಎಲ್ಲ ಸಿದ್ಧತೆಯೊಂದಿಗೇನೇ ಹೋಗಿ. ಈ ಸಲ ದಯಮಾಡಿಸಿಯೇ ತೀರುತ್ತಾರೆ. ನನ್ನ ಮತ್ತು ನಿಮ್ಮ ಆಸೆ ಈಡೇರಿತು, ದೇಸಾಯರೇ" ಎಂದು ಹೇಳಿದಂತಾಯಿತು.

"ಆಗಲಿ ಶರಣರೇ. ಈಗಲೇ ಸಾರೋಟ ತೆಗೆದುಕೊಂಡು ಸಿಬ್ಬಂದಿಯೊಂದಿಗೆ ಹೊರಟೆ" ಎನ್ನುತ್ತಲೇ ದೇಸಾಯರು ಕಣ್ಣು ತೆರೆದರು. ಎದುರಿಗೆ ಯಾರೂ ಇಲ್ಲ. ಶರಣರು ಕನಸಿನಲ್ಲಿ ಬಂದು ಹೇಳಿದರು ಎಂದುಕೊಂಡು ಎದ್ದವರೇ ಸ್ನಾನ ಪೂಜೆ ಮುಗಿಸಿ ಸಂಸ್ಥಾನದ ಸಾರೋಟ ಕಟ್ಟಿಸಿ ಕೊಂಡು ಸಿಬ್ಬಂದಿಯೊಂದಿಗೆ ನರೇಗಲ್ಲ ಗ್ರಾಮಕ್ಕೆ ಹೊರಟೇ ಬಿಟ್ಟರು.

ತೋಟವನ್ನು ಹೊಕ್ಕು ಪರ್ಣಕುಟೀರಕ್ಕೆ ಬಂದು ಲಿಂಗ ಧ್ಯಾನದಲ್ಲಿದ್ದ ಶ್ರೀ ಮಳೆಯಪ್ಪಯ್ಯನವರ ಮುಂದೆ ಫಲ ಪುಷ್ಪಗಳನ್ನಿರಿಸಿ ದೇಸಾಯಿ ರಾಮಪ್ಪನವರು ಸಾಷ್ಟಾಂಗ ವೆರಗಿದರು. ಅವರೊಂದಿಗೆ ಬಂದ ಭಕ್ತ ಸಮೂಹವೂ ಭಯಭಕ್ತಿಗಳಿಂದ ಸಾಷ್ಟಾಂಗವೆರಗಿತು. ಕೆಲ ಹೊತ್ತಿನಲ್ಲಿ ಮಳೆಯಪ್ಪಯ್ಯನವರು ಕಣ್ತೆರೆದು ನೋಡಿದಾಗ ಪರಮಾ ನಂದಭರಿತರಾಗಿ,

"ಏಳಿ ದೇಸಾಯರೇ. ನೀವೇ ಗೆದ್ದಿರಿ. ಶರಣರ ಹಾಗೂ ನಿಮ್ಮ ಭಕ್ತಿಗೆ ಲಿಂಗಯ್ಯ ಮೆಚ್ಚಿ ಒಪ್ಪಿಕೊಳ್ಳುವಂತೆ

ಮಾಡಿದ. 'ಹೆಸರಿಡಬಾರದ ಘನತರಲಿಂಗನ ಹೆಸರಿಟ್ಟು, ವಾಙ್ಮನಕ್ಕಗೋಚರವಪ್ಪ ಲಿಂಗನ ವಾಕ್ಯಕ್ಕೆ ತಂದು.... ಚಿತ್ತಶುದ್ಧನ ಮಾಡಿದ ಬಸವಣ್ಣ' ನಡೆಸಿದಂತೆ ಆಗಲಿ ಎಂದು ನಾನು ಸಿದ್ಧವಾಗಿದ್ದೇನೆ" ಎಂದರು.

"ಬುದ್ಧಿ, ನಾವು ಕೃತಾರ್ಥರಾದೆವು. ಚಿತ್ತರಗಿ ಪೀಠ ಬಹಳ ಕಾಲ ಅಧಿಪತಿಗಳಿಲ್ಲದೆ ಉಳಿಯುವಂತಾಯಿತಲ್ಲ ಎಂಬ ಚಿಂತೆಯಲ್ಲಿ ಕೊರಗುತ್ತಿದ್ದ ಪೂಜ್ಯ ಶ್ರೀಮದ್ದಾನೇಶ್ವ ರರು ಪೀಠದ ಅಸಂಖ್ಯಾತ ಭಕ್ತರು ಇಂದು ಪರಮಹರ್ಷ ಜಲದಲ್ಲಿ ಮುಳುಗುವಂತಾಯಿತು ಬುದ್ಧಿ. ಬಿನ್ನಹ ಸ್ವೀಕ ರಿಸಿ ಇನ್ನು ಇಲಕಲ್ಲಿಗೆ ದಯಮಾಡಿಸಬೇಕು" ಎಂದು ದೇಸಾ ಯರು ಬಿನ್ನಹ ಮಾಡಿಕೊಂಡರು.

ಇಳೆಯ ಭಾಗ್ಯ ಇಲಕಲ್ಲಿಗೆ

ಸಿಂಗರಿಸಿದ ಸಾರೋಟದಲ್ಲಿ ಶ್ರೀ ಮಳೆಯಪ್ಪಯ್ಯನವ ರನ್ನು ಕುಳ್ಳಿರಿಸಿಕೊಂಡು ನಾಗಾಲೋಟದಿಂದ ಹೊರಟವು ಶ್ವೇತಾಶ್ವಗಳು ಇಲಕಲ್ಲಪುರಕ್ಕೆ, ದಿಗ್ವಿಜಯ ಸಾಧಿಸಿದಂತೆ. ಇವರು ಇಲಕಲ್ಲಪುರ ಮುಟ್ಟುವ ಮೊದಲೇ ದೇಸಾಯರ ಅವಸರದ ಓಲೆಕಾರ ಪುರದ ಪ್ರಮುಖರಿಗೆ ಮಳೆಯಪ್ಪಯ್ಯ ನವರನ್ನು ದೇಸಾಯರು ಕರೆತರುವ ಸುದ್ದಿಯನ್ನು ಬೀರಿದ್ದ. ಊರ ಹೊರಗೆ ಇವರು ಬರುತ್ತಿರುವಂತೆ ಇಡೀ ಊರೇ ಸ್ವಾಗತಕ್ಕಾಗಿ ನಿಂತಿರುವುದನ್ನು ಕಂಡರು ಮಳೆಯಪ್ಪಯ್ಯ ನವರು. ಮಂಗಲವಾದ್ಯಗಳು ಮೊಳಗಿದವು. ಸುಮಂಗಲೆ ಯರು ಪಂಚಾರತಿ ಹಿಡಿದು ಬೆಳಕಿನ ಸ್ವಾಗತ ಮಾಡಿದರು.

ಈ ಜನರ ಭಕ್ತಿ, ವಿಜಯಮಹಾಂತೇಶ್ವರನಲ್ಲಿಟ್ಟಿರುವ ಶ್ರದ್ಧೆ ಕಂಡು ಬೆರಗಾದರು ಮಳೆಯಪ್ಪಯ್ಯನವರು.

ಪಟ್ಟಾಭಿಷೇಕ

ಮೆರವಣಿಗೆ ಸಕಲ ವಾದ್ಯಗಳೊಂದಿಗೆ, ಜಯಘೋಷ ಗಳೊಂದಿಗೆ ಮಠಕ್ಕೆ ಬಂದಿತು. ನಾಡಿನ ತುಂಬ ಪಟ್ಟಾಭೀ ಷೇಕದ ಕರೆ ಓಲೆಗಳು ಭಕ್ತರಿಗೆ ಹೋದವು. ಮಠಾಧೀಶ್ವರ ರಿಗೆ, ದೊರೆಗಳಿಗೆ, ದೇಸಾಯಿರಿಗೆ, ಅಧಿಕಾರಿಗಳಿಗೆ, ಆಮಂತ್ರಣಗಳು ಅವರವರ ಯೋಗ್ಯತೆಗೆ ತಕ್ಕ ರೀತಿಯಲ್ಲಿ ಕಳಿಸಲ್ಪಟ್ಟವು. ಇಲಕಲ್ಲ ಜಾತ್ರೆಯ ಬಣ್ಣ ತಳೆಯಿತು. ತಳಿರು ತೋರಣಗಳಿಂದ, ಕಮಾನುಗಳಿಂದ ಪುರ ಸಿಂಗಾರ ಗೊಂಡಿತು. ಎಲ್ಲರ ಮನೆಗಳಲ್ಲೂ ಹಬ್ಬದ ಉಬ್ಬರ. ಸಂತೋಷದ ಬುಗ್ಗೆ ಚಿಮ್ಮುತ್ತಲಿತ್ತು. ನಾಡಿನ ನಾನಾ ಭಾಗದಿಂದ ಸಾವಿರಾರು ಸಂಖ್ಯೆಯಲ್ಲಿ ವಿಜಯಮಹಾಂತೇ ಶನ ಭಕ್ತರು ನೆರೆ ಬಂದಂತೆ ಬಂದರು.

ಇಲಕಲ್ಲ ಮಠ ಝುಗಝುಗಿಸುತ್ತಲಿತ್ತು. ಚರಪೀಠಾ ರೋಹಣಕ್ಕೊಪ್ಪುವ ದಿವ್ಯ ಲಕ್ಷಣಗಳೆಲ್ಲ ಅಲ್ಲಿ ನೆಲೆಸಿದ್ದವು. ಶಿವತಿಂಥಿಣಿ ತಣಿಯುತ್ತಿರುವಂತೆ, ಭಕ್ತರು ಭಕ್ತಿಯ ಪರಾ ಕಾಷ್ಠತೆಯಲ್ಲಿ ಭಕ್ತಿ ವಿಹ್ವಲರಾಗಿ ಕುಣಿಯುತ್ತಿರುವಂತೆ, ಹದಿನೆಂಟುನೂರ ಒಂದರ ಶಾಲಿವಾಹನ ಶಕೆ ಪ್ರಮಾಧಿ ನಾಮಾಬ್ಧ ವೈಶಾಖ ಶುಕ್ಲ ಚತುರ್ದಶಿ ಸೋಮವಾರದಂದು ಮಹಾ ತಪಸ್ವಿ ಮಳೆಯಪ್ಪಯ್ಯನವರಿಗೆ ಶ್ರೀ ವಿಜಯ ಮಹಾಂತೇಶನೆಂಬ ಪುಣ್ಯ ನಾಮವನ್ನು ನೀಡಿ ಚರಪಟ್ಟವ

ಕಟ್ಟಿದರು. ಚಿತ್ತರಗಿ ಪೀಠದ ಹಾಗೂ ಶ್ರೀಮದ್ಗಾನೇಶ್ವರರ, ಪೀಠದ ಭಕ್ತರ, ಬಳ್ಳಾರಿಯ ಶರಣರ ಆಶೆ ಕೈಗೂಡಿತು.

ಬಯಲಗಳಿಕೆಯಲಿ ನಿರತ

ಪೀಠಾರೋಹಣದ ನಂತರವೂ ಮೊದಲಿನಂತೆಯೇ, ಅದಕ್ಕೂ ಹೆಚ್ಚಾಗಿ, ಲಿಂಗಪೂಜೆಯಲ್ಲಿ ಕಳೆಯತೊಡಗಿದರು ಶ್ರೀ ವಿಜಯಮಹಾಂತ ಸ್ವಾಮಿಗಳು. ಊರ ಹೊರಗೆ ಎರಿಹಳ್ಳ ಹಾಗೂ ಮಸಾಗಿ ಹಳ್ಳಗಳ ಸಂಗಮದ ಮಧ್ಯದಲ್ಲಿರುವ ಮಠದ ತೋಟವೇ ಶ್ರೀಗಳ ಧ್ಯಾನಧಾಮವಾಯಿತು. ಅಲ್ಲಿ ಅವರು ಪದ್ಮಾಸನದಲ್ಲಿ ಕುಳಿತು ಕರಸ್ಥಲದಲ್ಲಿ ಮೂರ್ತಿಗೊಂಡಿರುವ ಪರಮಶಿವಲಿಂಗದಲ್ಲಿ ದೃಷ್ಟಿ ಇರಿಸಿ ಮತ್ತೆ ದೃಷ್ಟಿಯೋಗದ ಸಾಧನೆಯಲ್ಲಿ ನಿರತರಾದರು. ಸಮಗ್ರ ಹನ್ನೆರಡು ವರುಷಗಳ ಕಾಲ ಈ ಸಾಧನೆ ಕಟ್ಟುನಿಟ್ಟಾಗಿ ನಡೆಯಿತು. ಈ ಸಾಧನೆಯಲ್ಲಿ ಬೇರಿಲ್ಲದ ಬೆಳಗು ಅವರನೊಳಕೊಂಡಿತು. ನಿತ್ಯಪ್ರಸನ್ನತೆಯನ್ನು ಶ್ರೀಗಳವರಿಗೆ ತಂದುಕೊಟ್ಟಿತು. ಮಿಂಚಿನ ಬೆಳಕಿನಲ್ಲಿ ಪಂಚವದನನನ್ನು ಸಾಕ್ಷಾತ್ಕರಿಸಿಕೊಂಡರು. ಅಂತರಂಗದ ಕರಣಂಗಳೆಲ್ಲ ಲಿಂಗಕಿರಣಗಳಾದವು. ಈ ಸಮಯದಲ್ಲಿ ಅವರ ಸಂಗಾತಿಯಾಗಿದ್ದುದು ಅಪ್ಪಗಳ(ಬಸವಣ್ಣನವರ)ವಚನಗಳು. ಬಸವಣ್ಣನೇ ಅವರ ಪಾಲಿಗೆ ಮಂತ್ರವಾದ. ಆತನ ವಚನಗಳ ಅಭ್ಯಾಸ, ಆಚರಣೆಯೇ ಅವರ ನಿತ್ಯದ ಬದುಕಾಯಿತು.

ಅಲ್ಲಿಂದ ಮುಂದೆ ಅವರು ಲಿಂಗದಲ್ಲಿ ಸಂಪನ್ನನಾಗಿ ಗುರುವಾದ ಬಸವಣ್ಣನನ್ನು ಒಂದು ನಿಮಿಷವೂ ಅಗಲಲಿಲ್ಲ.

ಅವರು ಹೋದಲ್ಲೆಲ್ಲ ಅವರ ಬೆನ್ನಿಗೆ ಬಸವಣ್ಣನ ವಚನಗಳ ಕಟ್ಟು, ಮಠದ ಹಸು ಮಹಾಂತಮ್ಮ ಜೊತೆಗೆ.

ಮಹಾಂತಮ್ಮ

ಆ ಹಸು ಮಹಾಂತಮ್ಮ ವಿಜಯ ಮಹಾಂತೇಶ್ವರರ ಜೀವನದಲ್ಲಿ ಬಹು ದೊಡ್ಡ ಪಾತ್ರ ವಹಿಸಿತು. ಎಲ್ಲಿಗೆ ಹೋಗುವುದಿರಲಿ ಶ್ರೀಗಳಿಗೆ ಮೊದಲು ಮಹಾಂತಮ್ಮನ ಅಪ್ಪಣೆ ಬೇಕು_ಜನರಿಗೆ ಹಾಗೆನಿಸುತ್ತಿತ್ತು ಅಷ್ಟೆ. ಶ್ರೀಗಳ ಉದ್ದೇಶ, ಇಚ್ಛೆ ಮೊದಲೇ ತನ್ನ ಭಕ್ತಿಯ ಶಕ್ತಿಯಿಂದ ಅರಿತು ಶ್ರೀಗಳು 'ಹೊರಡೋಣವೇ ಮಹಾಂತಮ್ಮ' ಎಂದ ಕೂಡಲೇ ಅವರ ಇಚ್ಛೆಯನ್ನರಿತು ಹೊರಡುತ್ತಿತ್ತು ಆ ಹಸು. ನೋಡಿದ ಜನ ಮಹಾಂತಮ್ಮ ನಡೆದಲ್ಲಿಗೆ ಶ್ರೀಗಳು ಹೊರಟಿದ್ದಾರೆ ಎಂದು ತಿಳಿಯುತ್ತಿದ್ದರು. ಮಹಾಂತಮ್ಮನ ಮೈ ಮೇಲೆ ಲಿಂಗ ಮುದ್ರೆ ಹಾಕಲಾಗಿತ್ತು. ಶಿವಯೋಗಿಯ ಪ್ರಸಾದಕ್ಕೆ ಹಾಲು ಸಲ್ಲಿಸುವ ಮಹಾಂತಮ್ಮ ಭವಿಯಾಗಿರಬಾರದಲ್ಲ. ಅಲ್ಲಲ್ಲಿ ಮೇಯಲು ಹೋಗುವ ಹಾಗಿಲ್ಲ. ಮಠದಲ್ಲಿದ್ದಾಗ, ಹೊರಗೆ ಹೋದಾಗಲೂ ಹಾಕಿದ ಹುಲ್ಲು ಮೇವು. ಎಲ್ಲಿಯೂ ಮನಬಂದಂತೆ ತಿನ್ನುತ್ತಿರಲಿಲ್ಲ ಮಹಾಂತಮ್ಮ. ಆಕೆಯದೂ ಎಂಥ ಶೀಲ, ಎಂಥ ಭಕ್ತಿ !

ತಂಗಾಳಿಯಂತೆ ಸುಳಿದ ಜಂಗಮ ಪುರುಷ

ಹೀಗೆ ಶ್ರೀವಿಜಯಮಹಾಂತ ಸ್ವಾಮಿಗಳು ಬಸವಣ್ಣನವರ ವಚನಾಮೃತದೊಂದಿಗೆ, ಮಹಾಂತಮ್ಮನೊಂದಿಗೆ

ನಾಡನ್ನೆಲ್ಲ ಸಂಚರಿಸಿ ಪ್ರಾಪಂಚಿಕರಲ್ಲಿ ಭಕ್ತಿಯ ನೆಲೆಗೊಳಿಸುವ ಕಾಯಕದಲ್ಲಿ ನಿರತರಾದರು. ಹೋದ ಹೋದಲ್ಲೆಲ್ಲ ಪವಾಡಗಳು ಸಹಜವಾಗಿ ನಡೆದುಹೋಗುತ್ತಿದ್ದುವು. ಈ ವಿರಾಗಿ ಚರಜಂಗಮನನ್ನು ದರ್ಶನ ಮಾಡಿಕೊಂಡ ಭಕ್ತಸ್ತೋಮ ತಮ್ಮ ಬದುಕೇ ಸಾರ್ಥಕವಾಯಿತೆಂದು ಸಂತೃಪ್ತಿ ಹೊಂದಿತು. ಹೀಗೆ ಚಿತ್ತರಗಿ ಪೀಠದ ಅಸಂಖ್ಯಾತ ಭಕ್ತರಲ್ಲಿ ಬಹು ಹತ್ತಿರ ಬಂದವರು ಹಲವರು. ಯಾವುದೇ ಜಾತಿ, ಮತ, ಪಂಥಗಳೆನ್ನದೆ ಸಕಲಜೀವಾವಳಿಗಳ ಲೇಸನ್ನೇ ಬಯಸಿದ ಈ ಗುರುವಿಗೆ ಸಕಲ ಧರ್ಮಿಯರೂ ಶಿಷ್ಯರಾಗಿದ್ದರು. ಈ ಶ್ರೀ ಗುರುವಿನ ಮೊದಲ ಚರಿತ್ರೆಯನ್ನು ಓರ್ವ ವೈಷ್ಣವ ಭಕ್ತ ಬರೆದನೆಂಬುದು ಇಲ್ಲಿ ಗಮನಾರ್ಹ.

ದಯವೇ ಶ್ರೀಗಳ ಧರ್ಮವಾಗಿತ್ತು; ಅಂತಃಕರಣವೇ ಅವರ ಅನುಗ್ರಹವಾಗಿತ್ತು. ಯಾರ ಮನೆಯಲ್ಲೂ ಅವರು ಬಿಡಾರ ಹಾಕುತ್ತಿರಲಿಲ್ಲ. ಮಠದಿಂದ ಹೊರಡುವಾಗ ಸವಾರಿ ಬಂಡಿಯಲ್ಲಿ ಎಲ್ಲ ಸಾಮಗ್ರಿಯನ್ನು ಹಾಕಿಕೊಂಡೇ ಹೊರಡುತ್ತಿದ್ದರು. ಅದೆಷ್ಟೋ ಸಲ ತಮ್ಮ ಪ್ರಸಾದವನ್ನು ತಾವೇ ಸಿದ್ಧಗೊಳಿಸಿಕೊಳ್ಳುತ್ತಿದ್ದರು. ಮಠದಿಂದ ಕಾರಭಾರಿಗಳು, ಸೇವಕರು ಬೇರೆ ಊರಿಗೆ ಹೋದರೂ ಅವರಿಗೆ ಸಕಲ ಸಾಮಗ್ರಿಗಳನ್ನು ಕೊಟ್ಟು ಕಳಿಸುತ್ತಿದ್ದರು. ಹೋದಲ್ಲಿ ಯಾರದೇ ಮನೆಯಲ್ಲಿ ಪ್ರಸಾದ ಸ್ವೀಕರಿಸಕೂಡದು, ಯಾರಿಗೂ ತೊಂದರೆ ಕೊಡಕೂಡದು ಎಂಬುದು ಅವರ ಅಪ್ಪಣೆಯಾಗಿರುತ್ತಿತ್ತು.

ಸಿದ್ಧಿ ಪುರುಷ

ಹುನಗುಂದದಲ್ಲಿ ನೀರಿರಲಿಲ್ಲ. ತೋಡಿಸಿದ ಬಾವಿಯಲ್ಲಿ ನೀರು ಬರಲಿಲ್ಲ. ಶ್ರೀಗಳು ದಯಮಾಡಿಸಿದರು. ಗಂಗಮ್ಮನ ಬರವಿಗಾಗಿ ಬಾವಿ ದಂಡೆಯಲ್ಲಿ ಕಾದರು. ಅವರು ಸಂಕಲ್ಪ ಮಾಡಮಾಡುತ್ತಲೇ ಬಾವಿಯಲ್ಲಿ ಸೆಲೆ ಬುಗ್ಗೆಯಾಗಿ ಚಿಮ್ಮ ತೊಡಗಿ ನೋಡನೋಡುತ್ತಲೇ ಬಾವಿ ತುಂಬ ತುಂಬಿದಳು ಗಂಗಮ್ಮ.

ಅದೇ ಹುನಗುಂದದ ಗುರುಬಸಯ್ಯ ಸುಳ್ಳು ಹೇಳಿದ ಶ್ರೀಗಳಿಗೆ–ಅದೂ ಒಂದು ಹಾಸುಗಲ್ಲಿಗಾಗಿ. ಆತ ಇನ್ನೇನು ಯಮನ ಪಾಲಾಗಲಿದ್ದ. ಶ್ರೀಗಳಲ್ಲಿ ಬಂದು ಮೊರೆ ಹೋದ. ಅಂತಃಕರಣಿಗಳಾದ ಶ್ರೀಗಳು ಕೃಪಾದೃಷ್ಟಿಯಿಂದ ನೋಡಿದರು. ಗುರುಬಸಯ್ಯ ಮೊದಲಿನಂತಾದ. ಆದರೆ ಮುಂದೆಂದೂ ಸುಳ್ಳಾಡಲಿಲ್ಲ.

ಒಮ್ಮೆ ಚಿತ್ತರಗಿಯ ಮಠದಲ್ಲಿ ಶ್ರೀಗಳು ಒಳಗಿದ್ದಾರೆ. ಆದರೆ ಅವರ ಇರವನ್ನು ಅರಿಯದ ಓರ್ವ ಭಕ್ತ ಹಾಗೂ ಓರ್ವ ಜಂಗಮ ಮಠದ ಕಟ್ಟೆಯ ಮೇಲೆ ಕುಳಿತು ವಿಜಯ ಮಹಾಂತೇಶನನ್ನು ಸಾಕ್ಷಿಯಿಟ್ಟು ಪಣ ಕಟ್ಟಿದರು.

ಭಕ್ತನ ಮಾತು ಇದು... "ಜಂಗಮಯ್ಯ, ಮಳೆ ಇಲ್ಲದೆ ಬೆಳೆಗಳು ಹಾಳಾಗುತ್ತಲಿವೆ. ನೀವೆಲ್ಲ ಕರಿಗಡಬು ಹೊಡಿಲಿಕ್ಕೆ ಅಷ್ಟೆ ಸ್ವಾಮಿಗಳು. ನೋಡು ಈಗ ಮಳೆ ಇಲ್ಲ. ಮಳೆ ಬರಿಸು ನೋಡೋಣ, ನಿನ್ನ ಜಂಗಮ ಶಕ್ತಿಯಿಂದ."

ಜಂಗಮಯ್ಯನಿಗೆ ಈ ಮಾತು ಮರ್ಮಕ್ಕೇ ತಾಕಿತು. ಯಾವುದೋ ಶಕ್ತಿ ಸಂಚಾರವಾದಂತಾಯಿತು ಮೈಮನದಲ್ಲಿ; ಹೇಳಿಯೇಬಿಟ್ಟ, "ಮಳೆ ಬೆಳಗಾಗುವುದರೊಳಗಾಗಿ

ಬರ್ತ್ತದ. ಆದರ ಒಂದು ಕರಾರು. ನೀನು ಕರಿಗಡಬು ಹೋಳಿಗೆ ಸಾವಿರದೊಂದು ಜಂಗಮರಿಗೆ ಗಣಾರಾಧನೆ ಮಾಡಿ ಸಬೇಕು. ಹೇಳು. ಸಿದ್ಧ ಆದೀ ಏನು ?"

ಭಕ್ತ ಆದಕ್ಕೆ, "ಆಗೇ ಬಿಡಲಿ ಅಯ್ಯನೋರೆ. ಮಳೆ ಬರಲಿ ಸಮಾರಾಧನೆ ನಡೆದೇ ತೀರ್ತ್ತದ. ಆದರೆ ಮಳೆ ಬರ್ತ್ತದ ಅನ್ನೋದಕ್ಕೆ ಭರವಸೆ ಏನು?" ಎಂದರೆ ಜಂಗಮ, "ವಿಜಯ ಮಹಾಂತೇಶನ ಆಣೆಯಾಗಿ ಮಳೆ ಬರ್ತ್ತದ" ಎನ್ನಬೇಕೆ ?

ಈ ಮಾತುಗಳನ್ನು ಒಳಗಿದ್ದ ವಿಜಯ ಮಹಾಂತ ಸ್ವಾಮಿಗಳು ಕೇಳಿಸಿಕೊಂಡರು. 'ಈ ಜಂಗಮ ಏನು ಪೇಚಿಗೆ ಬಿದ್ದನು' ಎಂದು ಅಂದುಕೊಂಡರು. ಆದರೂ ತಾನೇ ಸಾಕ್ಷಿ ಯಾಗಿ ನಿಂತಾಗ ಮಳೆ ಬರದಿದ್ದರೆ ಹೇಗೆ? ರಾತ್ರಿ ಬೆಳ್ಳ ಗಿದ್ದ ಆಕಾಶ ಮಧ್ಯರಾತ್ರಿ ಹೊತ್ತಿಗೆ ಕಾರ್ಮೋಡಗಳಿಂದ ತುಂಬಿ ಮಳೆ ಸುರಿಯಲಾರಂಭಿಸಿತು. ಜಂಗಮಯ್ಯನ ಮಾತನ್ನು ವಿಜಯಮಹಾಂತೇಶನ ತಪಸ್ಸು ಗೆಲ್ಲಿಸಿ ಕೊಟ್ಟಿತ್ತು. ಶ್ರೀಗಳು ಜಂಗಮನನ್ನು ಕರೆದು "ಈ ಪಣ ಒಳ್ಳೆಯದಲ್ಲ. ಯಾವ ಭರವಸೆಯಿಂದ ಈ ಮಾತು ಕೊಟ್ಟೆ ಭಕ್ತನಿಗೆ?" ಎಂದಾಗ ಜಂಗಮ ನುಡಿದೇ ಬಿಟ್ಟ, "ನಾನು ನಂಬಿದ ವಿಜಯಮಹಾಂತೇಶ, ನಿಮ್ಮ ಮೇಲಿನ ಭರವಸೆ ಯಿಂದ" ಎಂದು. ವಿಜಯಮಹಾಂತೇಶನ ಬದುಕಿನಲ್ಲಿ ಸಹ ಜವಾಗಿ ಇಂಥ ಪವಾಡಗಳು ಸಾವಿರಾರು. ಹೀಗೆ ಭಕ್ತರನ್ನು ಉದ್ಧರಿಸುತ್ತ ಈ ನಿರಂಜನಮೂರ್ತಿ ತಂಗಾಳಿಯಾಗಿ ಸುಳಿದ, ನಾಡನ್ನೆಲ್ಲ ಸುತ್ತಿದ, ತಮ್ಮ ಮಹಾತಪಸ್ಸಿನ ಬಲದಿಂದ ಚಿತ್ತರಗಿ ಪೀಠ ದೇದೀಪ್ಯಮಾನವಾಗಿ ಬೆಳಗುವಂತೆ ಮಾಡಿದ.

ಕರುಣಾಳು

ಚಿತ್ತರಗಿ ಮಠದ ಜೀರ್ಣೋದ್ಧಾರದ ಕಾರ್ಯ ಆರಂಭಿಸಿದಾಗ ಮಠದ ಕಟ್ಟಡಕ್ಕೆ ಬೇಕಾಗುವ ಕಲ್ಲುಗಳನ್ನು ಶಿರೂರ ಹತ್ತಿರದ ಅಡವಿಯಲ್ಲಿ ತೆಗೆಯಿಸುತ್ತಿದ್ದರು. ವಡ್ಡರ ಆ ಕೆಲಸ ನಡೆದಲ್ಲಿಗೆ ಒಮ್ಮೆ ಶ್ರೀಗಳೂ ದಯಮಾಡಿಸಿದರು. ವಡ್ಡರು ಕಲ್ಲು ಒಡೆದು ದಣಿದಾಗ ಕುಡಿಯಲು ನೀರು ಕೂಡ ಅವರಿಗಿರಲಿಲ್ಲ. ಅವರು ದೂರದ ನದಿಗೆ ಹೋಗಬೇಕಾಗಿತ್ತು. ಇದನ್ನು ಕಂಡ ಶ್ರೀಗಳು ಅವರ ಈ ತೊಂದರೆಗಾಗಿ ಮರುಗಿದರು. ಕೂಡಲೇ ತಾವೇ ಒಂದು ಸ್ಥಳದಲ್ಲಿ ಕುಳಿತು ತಮ್ಮ ಶ್ರೀಹಸ್ತದಿಂದಲೇ ನೆಲದ ಒಡಲು ಬಗೆದರು. ಅಚ್ಚರಿಯೆಂದರೆ, ಜಲಧಾರೆ ಕೂಡಲೆ ಚಿಮ್ಮಿತು. ಅಂದಿನಿಂದ ಆ ಜಲಕುಂಡ 'ವಿಜಯಮಹಾಂತೇಶ ತೀರ್ಥ'ವಾಗಿ ಈಗಲೂ ಮೆರೆಯುತ್ತಿದೆ. ಎಂಥ ಬೇಸಿಗೆಯಲ್ಲೂ, ಸುತ್ತಲು ಹತ್ತು ಹರದಾರಿ ನೀರು ಬತ್ತಿ ಹೋದರೂ ಈ ಕುಂಡದಲ್ಲಿ ನೀರು ಬತ್ತಿ ಹೋದದ್ದನ್ನು ಯಾರೂ ಕಂಡಿಲ್ಲ.

ಈ ಎಲ್ಲ ಘಟನೆಗಳು ತಮಗೆಂದು ಅಥವಾ ಜನರನ್ನು ಮೆಚ್ಚಿಸಲೆಂದು ಮಾಡಿದವುಗಳಲ್ಲ. ಅವು ಸಹಜವಾಗಿ ನಡೆದು ಹೋಗುತ್ತಿದ್ದುವು. ಅವರು ಈ ಎಲ್ಲವುಗಳನ್ನೂ ಮೀರಿ ನಿಂತ ಮಹಾಂತರಾಗಿದ್ದರು.

ಶಿವಯೋಗಮಂದಿರ

ಶ್ರೀಗಳ ಸಮಕಾಲೀನರೂ, ಶ್ರೀಗಳಿಗಿಂತ ಚಿಕ್ಕವರೂ ಆದ ಹಾನಗಲ್ಲ ಕುಮಾರ ಸ್ವಾಮಿಗಳು ಸದಾಕಾಲ ಸಮಾಜ

ಶಿಶುವಿನ ಚಿಂತನೆಯಲ್ಲಿಯೇ ಇರುತ್ತಿದ್ದರು. ಧರ್ಮ ಜಾಗೃತಿಗಾಗಿ ಅವರು ಸಲ್ಲಿಸಿದ ಸೇವೆ ಅಪಾರ. ಅವರ ಬಗೆಗೆ ಶ್ರೀಗಳಲ್ಲಿ ಅಪಾರ ಅಭಿಮಾನ. ಹಾನಗಲ್ಲ ಶ್ರೀಗಳಿಗೆ ವಿಜಯಮಹಾಂತೇಶ್ವರರಲ್ಲಿ ಅಸದಳ ಶ್ರದ್ಧೆ.

ಮಠಗಳಿಗೆ ಮಠಾಧಿಪತಿಗಳನ್ನು ತರಬೇತಿಗೊಳಿಸುವುದು, ವಚನ ಸಾಹಿತ್ಯದ ಪ್ರಕಟನೆ ಕೈಕೊಳ್ಳುವುದು, ಶುದ್ಧವಾದ ಪಂಚಸೂತ್ರದ ಲಿಂಗಗಳನ್ನು, ಶುದ್ಧವಾದ ಭಸ್ಮಗಳನ್ನು ಸಿದ್ಧಗೊಳಿಸುವುದು, ಈ ಎಲ್ಲ ಕಾರ್ಯ ನಡೆಯಲು ಒಂದು ಶಿವಯೋಗಮಂದಿರದ ಸ್ಥಾಪನೆಯಾಗಬೇಕಾಗಿತ್ತು. ಸಾವಿರದೊಂಬೈನೂರ ಎಂಟರಲ್ಲಿ ಬಾಗಲಕೋಟೆಯಲ್ಲಿ ಸೇರಿದ್ದ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ಶಿವಯೋಗಮಂದಿರದ ಸ್ಥಾಪನೆ ಆಗಲೇಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅದರೊಂದಿಗೆ ಇಲಕಲ್ಲ ಶ್ರೀ. ಪ್ರ. ವಿಜಯಮಹಾಂತ ಸ್ವಾಮಿಗಳು ತೋರಿಸಿದ ಸ್ಥಳದಲ್ಲಿ ಈ ಮಂದಿರ ಸ್ಥಾಪಿಸಬೇಕೆಂದೂ ನಿರ್ಣಯ ಕೈಕೊಳ್ಳಲಾಯಿತು. ಹಾನಗಲ್ಲ ಕುಮಾರಸ್ವಾಮಿಗಳು ಆ ಕೂಡಲೇ ಇಲಕಲ್ಲಿಗೆ ನಡೆದೇಬಿಟ್ಟರು. ಹಾನಗಲ್ಲಪ್ಪಗಳು ಬಂದರೆಂದರೆ ಏನಾದರೊಂದು ಯೋಜನೆ ಇದ್ದೇ ಇರುತ್ತದೆ ಎಂಬುದು ವಿಜಯಮಹಾಂತ ಶಿವಯೋಗಿಗಳಿಗೆ ಗೊತ್ತು. ಬಂದವರೇ ಸಾಷ್ಟಾಂಗ ಹಾಕಿ ವೀರಶೈವ ಮಹಾಸಭೆಯ ನಿರ್ಣಯವನ್ನು ಬಿನ್ನವಿಸಿ, “ಸನ್ನಿಧಿ ಹೊರಡಬೇಕರಪಾ” ಎಂದರು. ಅವರದೂ ಅಷ್ಟೇ. ಇಬ್ಬರ ತಪಸ್ಸೂ ಸಮಾಜ ಪುರುಷನಿಗೇ ಮೀಸಲಾಗಿತ್ತು. ಇಬ್ಬರು ಶಿವಯೋಗಿಗಳ ಜೊತೆಗೆ ಅರ್ಟಾಳ ರುದ್ರಗೌಡರು, ಕಿತ್ತೂರ ರೇವಣಸಿದ್ಧಪ್ಪನವರು ಸುತ್ತಲಿನ ನಗರಗಳಿಂದ ಮಹಾಸಭೆಗೆ ಬಂದಿದ್ದ ಕೆಲ

ವೀರಶೈವ ಪ್ರಮುಖರು ಹಾಗೂ ಸದಾ ವಿಜಯಮಹಾಂತ ಶಿವಯೋಗಿಗಳ ಜೊತೆಗಿರುತ್ತಿದ್ದ ಮಹಾಂತಮ್ಮ ಸ್ಥಳದ ಅನ್ವೇಷಣೆಯಲ್ಲಿ ಹೊರಟರು.

ಇಲಕಲ್ಲದಿಂದ ಹೊರಟ ಈ ಯಾತ್ರೆ ಇತಿಹಾಸ ಪ್ರಸಿದ್ಧ ಹಾಗೂ ತನ್ನ ಶಿಲ್ಪಕಲೆಗೆ ಲೋಕಪ್ರಸಿದ್ಧವಾದ ಐಹೊಳೆ ಪಟ್ಟದಕಲ್ಲುಗಳಿಗೆ ಬಂದಿತು. ಕೆಲವರು ಇವುಗಳ ಪ್ರಸಿದ್ಧಿಗೆ ಮಾರುಹೋಗಿ ಇಲ್ಲಿಯೇ ಮಂದಿರ ಸ್ಥಾಪನೆ ಆಗಬಹುದು ಎಂದರು. ಆದರೆ ಇವರ ಯಾರ ಮಾತನ್ನೂ ಕೇಳಲು ಹಾನಗಲ್ಲ ಶ್ರೀಗಳು ಸಿದ್ಧರಿರಲಿಲ್ಲ. ವಿಜಯಮಹಾಂತಸ್ವಾಮಿಗಳು ಈ ಸ್ಥಳ ಮಂದಿರ ಸ್ಥಾಪನೆಗೆ ಸಲ್ಲದು–ಎಂದಪ್ಪಣೆ ಮಾಡಿದರು. ಅಲ್ಲಿಂದ ಯಾತ್ರೆ ಮುಂದು ಮುಂದಕ್ಕೆ ಹೊರಟಿತು. ಎಲ್ಲರ ಮುಂದೆ ಮಹಾಂತಮ್ಮ. ಅವಳ ಹಿಂದೆ ಹಿಂದೆ ಎಲ್ಲರೂ ಹೊರಟರು. ಎಲ್ಲೆಲ್ಲೂ ಮಾತು ನುಂಗಿದ ಮೌನ.

ಮಹಾಂತಮ್ಮ ಮುಂದೆಮುಂದೆ ಸಾಗಿ ನದಿ ಮಲಾಪಹಾರಿಯ ದಂಡೆಯಗುಂಟ ಹಬ್ಬಿರುವ ನಿಬಿಡವಾದ ಅಡವಿಯಲ್ಲಿ ಹೊಕ್ಕಳು. ಎಲ್ಲರೂ ಮೂಕವಿಸ್ಮಿತರಾಗಿ ನಡದೇ ನಡೆದರು. ಆ ಸ್ಥಳವನ್ನು ಮೊದಲೇ ವಿಜಯಮಹಾಂತ ಶಿವಯೋಗಿಗಳು ನಿಶ್ಚಯಿಸಿದ್ದರು. ಅದನ್ನು ಈಗ ಮಹಾಂತಮ್ಮ ತೋರಿಸುತ್ತಿದ್ದಳು ಅಷ್ಟೆ. ದಟ್ಟಡವಿಯ ಮಧ್ಯಕ್ಕೆ ಬಂದಾಗ ಬಯಲು – ಸೂರ್ಯನ ಬೆಳಕಿನಿಂದ ಥಳಕ್ಕನೆ ಬೆಳಗುವ ಬಯಲು – ಅಲ್ಲಿ ಚಿಕ್ಕದೊಂದು ಗದ್ದುಗೆ. ಅದರ ಸಮೀಪವೇ ಮಹಾಂತಮ್ಮ ನಿಂತಳು. ಶ್ರೀಗಳು ಹಾಗೂ ಅವರ ಜೊತೆಗಿದ್ದವರು ಅಲ್ಲಿಗೆ ಬಂದರು. ಈ ಗುಂಪಿನ ಜೊತೆಯಲ್ಲಿ ಸ್ಥಳಿಕ ನೆಲವಿಗಿಯ ವೃದ್ಧ ಅಂಗಡಿ ಫಕೀರಪ್ಪ ಇದ್ದ. ತ್ರಿಕಾಲ ಜ್ಞಾನಿಗಳೂ, ಮಹಾತಪಸ್ವಿ

ಗಳೂ ಆದ ವಿಜಯಮಹಾಂತ ಸ್ವಾಮಿಗಳು ಆ ಬಯಲು ಕಥೆಯನ್ನೆಲ್ಲ ಬಲ್ಲವರಾಗಿದ್ದರು. ಆದರೂ ಆದನ್ನೆಲ್ಲ ತಾವೇ ಹೇಳದೆ ಅಂಗಡಿ ಫಕೀರಪ್ಪನನ್ನು ಕೇಳಿದರು. ಆತ "ಈ ಗದ್ದುಗೆಗೆ ಕೊಟ್ಟೂರೇಶ್ವರನ ಗದ್ದುಗೆಯೆಂದು ನಮ್ಮ ಹಿರಿಯರ ಕಾಲದಿಂದಲೂ ಕರೆಯುತ್ತ ಬಂದಿದ್ದಾರೆ ಬುದ್ಧಿ. ಸುತ್ತುಮುತ್ತಲ ಜನ ಆಗಾಗ ಬಂದು ಈ ಗದ್ದುಗೆಯನ್ನು ಪೂಜಿಸುವುದು ಈಗಲೂ ಉಂಟು. ಇದು ಬಹಳ ಜಾಗೃತ ಸ್ಥಾನವೆಂದೂ ಪ್ರಸಿದ್ಧಿ ಪಡೆದಿದೆ, ಬುದ್ಧಿ" ಎಂದು ಹೇಳಲು ಆಗ ಶ್ರೀಗಳು,

"ಸರಿ. ಮಹಾಂತಮ್ಮನೂ ಇಲ್ಲಿಯೇ ಬಂದು ನಿಂತಿದ್ದಾಳೆ. ಮಹಿಮಾ ಪುರುಷನಾದ ಕೊಟ್ಟೂರೇಶನ ಗದ್ದುಗೆಯೂ ಇದೆ. ಹಾನಗಲ್ಲಪ್ಪಗಳ ಮಂದಿರ ಇಲ್ಲಿಯೇ ಆಗಲಿ. ಸ್ಥಳ ಪ್ರಶಾಂತವಾಗಿದೆ. ಸಮೀಪದಲ್ಲಿಯೇ ಮಲಾಪಹಾರಿ ತಾಯಿ ಹರಿಯುತ್ತಿದ್ದಾಳೆ. ಸುತ್ತಲೂ ಗುಡ್ಡದೋರೆ ಇದೆ. ವಟುಗಳಿಗೆ, ಸಾಧಕರಿಗೆ ಇದಕ್ಕಿಂತ ಪ್ರಶಾಂತ ಹಾಗೂ ಪ್ರಶಸ್ತ ಸ್ಥಳ ಇನ್ನೊಂದಿಲ್ಲ" ಎಂದು ಅಪ್ಪಣೆ ಮಾಡಿದರು.

ಕೆಲವರು ಇಂಥ ದಟ್ಟಾರಣ್ಯದಲ್ಲಿ ಶಿವಯೋಗಮಂದಿರ ಕಟ್ಟುವುದು ಅಷ್ಟು ಉಚಿತವಲ್ಲವೆಂದು ಹೇಳಿದರು. ಆಗ ಹಾನಗಲ್ಲ ಶಿವಯೋಗಿಗಳು,

"ಇಲಕಲ್ಲ ಅಪ್ಪಗಳ ಅಪ್ಪಣೆ. ಅದು ನನಗೆ ಶಿರೋಧಾರ್ಯ. ನೀವು ಬರ್ರಿ ಬಿಡ್ರಿ. ನಾನೊಬ್ಬನೇ ಆದರೂ ಸರಿ. ಮಂದಿರ ಇಲ್ಲಿಯೇ ನಿರ್ಮಾಣವಾಗುತ್ತದೆ. ಬುದ್ಧಿ, ಇನ್ನೊಂದು ಮಾತು ಕೃಪೆಯಿಟ್ಟು ನಡೆಸಿಕೊಡಬೇಕು. ಅದು ಮಂದಿರದ ಶಂಕುಸ್ಥಾಪನೆ, ಲಿಂಗಮುದ್ರೆ ಕಲ್ಲುಗಳ ಸ್ಥಾಪನೆ ಶ್ರೀಗಳ ಅಮೃತ ಹಸ್ತದಿಂದಲೇ ನೆರವೇರಬೇಕು" ಎಂದರು.

"ಆಗಲಿ. ಮಾಘ ಶುದ್ಧ ರಥಸಪ್ತಮಿ ದಿನದಂದು ಮುಹೂರ್ತವಿಟ್ಟುಕೊಳ್ಳಿ. ಎಲ್ಲ ಸಿದ್ಧತೆ ನಡೆಯಲಿ. ಇದು ಪರಮ ಪವಿತ್ರ ತಾಣ. ಶಿವಯೋಗಮಂದಿರ ಸ್ಥಾಪನೆಗೆ ಇದರಷ್ಟು ಉತ್ಕೃಷ್ಟವಾದ ತಾಣ ಇನ್ನೊಂದಿಲ್ಲ. ಇಲ್ಲಿ ಸಾಧನೆ ಮಾಡಿದ ವಟುಗಳು ನಿಮಗೆ, ನಾಡಿಗೆ ಕೀರ್ತಿ ತರುತ್ತಾರೆ" ಎಂದಪ್ಪಣೆ ಮಾಡಿದರು. ಒಪ್ಪಿಕೊಂಡಂತೆ ಸರಿಯಾಗಿ ದಯಮಾಡಿಸಿ ಮಂದಿರದ ಅಡಿಗಲ್ಲು ಹಾಗೂ ಲಿಂಗಮುದ್ರೆ ಕಲ್ಲುಗಳನ್ನು ಸ್ಥಾಪಿಸಿದರು. ಇಲಕಲ್ಲ ಈ ಶಿವಯೋಗಿಯ ಅಮೃತಹಸ್ತದಿಂದ ಆರಂಭವಾದ ಶಿವಯೋಗಮಂದಿರ ಈಗ ಬಹು ದೊಡ್ಡ ಸಂಸ್ಥೆಯಾಗಿ, ನಾಡಿನ ಚೇತನವಾಗಿ ನಿಂತಿರುವುದನ್ನು ನಾಡವರೆಲ್ಲ ಬಲ್ಲರು. ಅಲ್ಲಿ ಸಾಧನೆ ಮಾಡಿದವರು ಶಿವಯೋಗಿಗಳ ಆಶಯದಂತೆ ದೇಶವಿದೇಶಗಳಲ್ಲೂ ಈ ಧರ್ಮದ ಹೆಚ್ಚಳಿಕೆ ಮೆರೆಸುತ್ತಿದ್ದಾರೆ.

ಅವರಲ್ಲಿ ಪ್ರಮುಖರಾದವರೆಂದರೆ ಹುಬ್ಬಳ್ಳಿ ಮೂರು ಸಾವಿರ ಮಠದ ಇಂದಿನ ಜಗದ್ಗುರುಗಳಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜ ಯೋಗೀಂದ್ರರು.

ಮೂರು ಸಾವಿರ ಮಠದ ಇಂದಿನ ಜಗದ್ಗುರುಗಳು ಕೇವಲ ಶಿವಯೋಗಮಂದಿರದ ಸಾಧಕರಷ್ಟೇ ಅಲ್ಲ. ಅವರು ಇಲಕಲ್ಲ ಶಿವಯೋಗಿಗಳಿಗೆ ಪೂರ್ವಾಶ್ರಮದ ಸಂಬಂಧದಿಂದ ಮರಿ ಮೊಮ್ಮಕ್ಕಳಾಗಬೇಕು. ವಿಜಯಮಹಾಂತ ಶಿವಯೋಗಿಗಳ ಆಶೀರ್ವಾದವೇ ಇರಬೇಕು ಜಗದ್ಗುರುಗಳ ಈ ಧರ್ಮ ಜೈತ್ರಯಾತ್ರೆಗೆ. ಜಗದ್ಗುರುಗಳಿಗೆ ವಿಜಯಮಹಾಂತೇಶ್ವರ ಶಿವಯೋಗಿ ಹಾಗೂ ಹಾನಗಲ್ಲ ಕುಮಾರ ಶಿವಯೋಗಿ ಎರಡು ಕಣ್ಣು. ಅಷ್ಟೇ ಅಲ್ಲ ಅವರ ಜೀವನದ

ಉಸಿರು. ಶಿವಯೋಗಮಂದಿರ ಹಾನಗಲ್ಲ ಶ್ರೀಗಳು ಕಂಡ ದಿವ್ಯ ಕನಸು. ಅದನ್ನು ನನಸನ್ನಾಗಿ ಮಾಡಿಕೊಟ್ಟವರು ಇಲಕಲ್ಲ ವಿಜಯಮಹಾಂತ ಶಿವಯೋಗಿಗಳು. ಇಬ್ಬರು ಶಿವಯೋಗಿಗಳ ಕೂಸು ಈ ಶಿವಯೋಗಮಂದಿರ. ಈಗ ಅದೊಂದು ಲೋಕೋತ್ತರ ಮಂದಿರವಾಗಿದೆ.

ಬೆಳಗು ಮಹಾಬೆಳಗಿನಲೊಂದಾದ ಪರಿಯನೇನೆಂಬೆ

ವಿಜಯಮಹಾಂತ ಶಿವಯೋಗಿಗಳು ಸಮಗ್ರ ಮೂವತ್ತೆರಡು ವರ್ಷ ಕಾಲ ಚಿತ್ತರಗಿ ಪೀಠದ ಅಧಿಪತಿಗಳಾಗಿದ್ದರು. ಆದರೆ ಇಂದಿಗೂ ಕನ್ನಡ ಜನಮನದ ಪೀಠದಲ್ಲಿ ವಿರಾಜಮಾನರಾಗಿದ್ದಾರೆ. ಚಿತ್ತರಗಿಯ ಈ ಬೆಳಗು ಮಹಾಬೆಳಗಿನಲ್ಲಿ ಶಾಲಿವಾಹನ ಶಕೆ ಹದಿನೆಂಟು ನೂರಾ ಮೂವತ್ತು ಮೂರರ ವಿರೋಧಿಕೃತ ಸಂವತ್ಸರ ಕಾರ್ತಿಕ ಶುದ್ಧ ಪಂಚಮಿ ಶುಕ್ರವಾರ (ಕ್ರಿ.ಶ.೧೯೧೧) ದಂದು ಒಂದು ಗೂಡಿತು. ಶ್ರೀಗಳು ಶಿವಸಾಯುಜ್ಯವನ್ನು ಪಡೆದ ಸುದ್ದಿ ನಾಡಿನಲ್ಲೆಲ್ಲ ಹರಡಿತು. ಶಿವಯೋಗ ಮಂದಿರದಿಂದ ಹಾನಗಲ್ಲ ಕುಮಾರ ಶಿವಯೋಗಿಗಳು, ಹಾವೇರಿ ಶಿವಬಸವಸ್ವಾಮಿಗಳು ಇತರ ಮಠಾಧೀಶ್ವರರು ಇಲಕಲ್ಲಿಗೆ ಧಾವಿಸಿದರು. ಲಕ್ಷಾವಧಿ ಭಕ್ತ ಸಮೂಹ ವಿಜಯಮಹಾಂತೇಶನ, ಬಯಲಮೂರ್ತಿಯಾದ ಶಿವಯೋಗಿಯ ದರ್ಶನಕ್ಕಾಗಿ ಧಾವಿಸಿ ಬಂದರು. ಇಲಕಲ್ಲ ತುಂಬ ದುಃಖತಪ್ತ ಜನ. ವಿಜಯಮಹಾಂತೇಶನ ಅಂತಿಮ ಯಾತ್ರೆ ಆತನು ತಪಗೈದ ಮಠದ ತೋಟಕ್ಕೆ ಹೊರಟಿತು. 'ಅಲ್ಲಿ ಆತನ ಗುರು

ಶ್ರೀಗುರುಮಹಾಂತಸ್ವಾಮಿಗಳ ಸಮಾಧಿಯ ಪಕ್ಕದಲ್ಲಿಯೇ ವಿಧಿವತ್ತಾಗಿ ಕ್ರಿಯಾಸಮಾಧಿ ನಡೆಯಿತು. ಕೊನೆಯ ಕಾರ್ಯವನ್ನೆಲ್ಲ ಶ್ರೀ ಹಾನಗಲ್ಲ ಶಿವಯೋಗಿಗಳೇ ಶಿವ ಯೋಗಿಗೆ ಯೋಗ್ಯವಾದರೀತಿಯಲ್ಲಿ ಮಾಡಿ ಮುಗಿಸಿದರು. ಹಾನಗಲ್ಲ ಕುಮಾರ ಶಿವಯೋಗಿಯು ತಾಯ ಕಳೆದು ಕೊಂಡಂತಾದಾಗ ಉಳಿದ ಭಕ್ತರ ಸ್ಥಿತಿಯಂತೂ ವರ್ಣಿಸ ಲಾಗದು. ವಿಜಯಮಹಾಂತೇಶ್ವರ ನೆರಳಾಗಿದ್ದ ಮಹಾಂತ ಮ್ಮನ ಮೂಕ ರೋದನೆಯನ್ನು ಯಾರಿಂದಲೂ ನೋಡುವ ಧೈರ್ಯವಾಗಲಿಲ್ಲ.

ಕಂಗೊಳಿಸುವ ಮಂದಿರ

ಈಗ ಈ ಎರಡು ಸಮಾಧಿಗಳ ಮೇಲೆ ಸುಂದರ ಮಂದಿರ ನಿರ್ಮಾಣವಾಗಿದೆ. ಮೂರು ಸಾವಿರ ಮಠದ ಈಗಿನ ಜಗದ್ಗುರುಗಳು ಸಹಸ್ರಾರು ರೂಪಾಯಿ ವೆಚ್ಚ ಮಾಡಿ ಬಹು ಸುಂದರವಾದ ಜೋಡುಗೋಪುರ ನಿರ್ಮಿಸಿ ದ್ದಾರೆ – ಈಗ ಅದೊಂದು ಯಾತ್ರಾಸ್ಥಳ. ಇದ್ದಾಗಲೂ ಪವಾಡ ಮೆರೆದ ಮಹಾಂತೇಶ ಈಗಲೂ ಪವಾಡ ಮೆರೆ ಯುತ್ತಲೇ ಇದ್ದಾನೆ....

ಚಿತ್ತರಗಿ ಚಿಜ್ಜ್ಯೋತಿ ಪರದಲ್ಲಿ ಬೆಳಗುತಿದೆ
ಎಂಬ ಸತ್ಯದ ಕುರುಹು ಮಹಾಂತಗದ್ದಿಗೆಪೂಜೆ
ಚಿತ್ತರಗಿ ಸಜ್ಜ್ಯೋತಿ ಇಹದಲ್ಲಿ ಬೆಳಗುತಿದೆ
ಎಂಬರಿವು ಈಗ ಮಠದಲ್ಲಿ ಮಹಾಂತರ ಪೂಜೆ
ಇಹಪರದೆ ಬೆಳಗುವದು ಪೂರ್ಣಾಪರಂಜ್ಯೋತಿ.

ಬಾಂದಟ್ಟೆಯಂಚಿನಲಿ ಉದಯರವಿಶಶಿಗಳು
ಆದ್ಯಂತ್ಯ ರಹಿತದಾರತಿಗೈದು ಭೂದೇವಿ
ರವಿಚಂದ್ರರೋಲಿರ್ದ ಮಹಾಂತರಿಗೆತ್ತಿಹಳು.

* * *

ಚಿತ್ತರಗಿ ವಿಜಯ ಮಹಾಂತಪ್ಪಗಳ ಗದ್ದುಗೆಯು
ಪೂಜೆ ಸಾಗಿಹುದಲ್ಲಿ ಇಲಕಲ್ಲ ಪುರದಲ್ಲಿ
ಕಣ್‌ಬಿಟ್ಟು ನೀನದನು ಕಾಣಲೇಳು
ಕಿವಿಗೊಟ್ಟು ಮಹಾಂತನುತಿ ಕೇಳಲೇಳು.

ವಿಜಯಮಹಾಂತ ಶಿವಯೋಗಿಗಳ ನಂತರ ಈ ಪೀಠಕ್ಕೆ ಇಬ್ಬರು ಸ್ವಾಮಿಗಳಾಗಿ ಹೋದರು. ಅವರಿಬ್ಬರ ಹೆಸರೂ ಗುರುಮಹಾಂತಸ್ವಾಮಿಗಳು. ಅವರಿಬ್ಬರ ನಂತರ ಈಗಿನ ಶ್ರೀಗಳು ಬಿಜಾಪುರ ಜಿಲ್ಲೆಗೆ ಸೇರಿದ ಜಮಖಂಡಿ ತಾಲೂಕಿನ ಹಿಪ್ಪರಗಿ ಅವರು. ಶ್ರೀಗಳ ಪೂರ್ವಾಶ್ರಮದ ಹೆಸರೂ ಕೂಡ ಮಹಾಂತಯ್ಯನೆಂದೇ. ಸಾವಿರದೊಂಬೈನೂರ ಮೂವತ್ತೊಂದರಲ್ಲಿ ಅಲ್ಲಿಯ ಪಾಲಭಾವಿಮಠದ ಆಚಾರ ನಿಷ್ಠರಾದ ವಿರೂಪಾಕ್ಷಯ್ಯ ಹಾಗೂ ಅವರ ಧರ್ಮಪತ್ನಿ



ನೀಲಮ್ಮನವರ ಮಗನಾಗಿ ಜನಿಸಿದರು. ಶ್ರೀಗಳು ಹಾಲಿನಂಥ ಮನಸ್ಸಿನವರು. ಸಾವಿರದೊಂಬೈನೂರ ನಲವತ್ತಾರ

ರಲ್ಲಿಯೇ ಶಿವಯೋಗಮಂದಿರವ ಪ್ರವೇಶಿಸಿದ ಇವರು ಸಮಗ್ರ ಎಂಟುಹತ್ತು ವರ್ಷಗಳಕಾಲ ಸಾಧಕರಾಗಿ ಕನ್ನಡ, ಸಂಸ್ಕೃತ, ಇಂಗ್ಲಿಷ್, ಸಂಗೀತ ಅಭ್ಯಾಸ ಮಾಡಿದರು. ಮೂರು ಸಾವಿರಮಠದ ಈಗಿನ ಜಗದ್ಗುರುಗಳು ಕೂಡ ಆಗ ಅಲ್ಲಿಯೇ ಇದ್ದರು. ಮಹಾಂತಸ್ವಾಮಿಗಳವರಿಗೆ ಅವರದೇ ಪ್ರೋತ್ಸಾಹ ಮಾರ್ಗದರ್ಶನ ಆಗ, ಈಗಲೂ ಕೂಡ. ಸಾವಿರದೊಂಬೈನೂರ ಐವತ್ತೈದರಲ್ಲಿ ಮೂರು ಸಾವಿರ ಮಠದ ಈಗಿನ ಜಗದ್ಗುರುಗಳೊಂದಿಗೆ ಕಾಶಿಗೆ ಪ್ರಯಾಣ. ಅಲ್ಲಿ ಕೆಲಕಾಲ ಇದ್ದು ಸಂಸ್ಕೃತದಲ್ಲಿ ಪಾರಂಗತರಾದರು. ಅಲ್ಲಿಂದ ಬಂದನಂತರ ಸವದಿ ಮಠಕ್ಕೆ ಅಧಿಪತಿಗಳಾದರು. ನವಿಲುಗುಂದದ ಲಿಂಗೈಕ್ಯರಾದ ಬಸವಲಿಂಗಸ್ವಾಮಿಗಳ ಒತ್ತಾಯ ಹಾಗು ಮೂರು ಸಾವಿರಮಠದ ಈಗಿನ ಜಗದ್ಗುರುಗಳ ಅಪ್ಪಣೆಯಿಂದ ನವಿಲುಗುಂದದ ಗವಿಮಠದಲ್ಲಿ ಕೆಲ ವರುಷ ಇದ್ದುಕೊಂಡೇ ನವಿಲುಗುಂದ ಹಾಗೂ ನರಗುಂದ ತಾಲ್ಲೂಕಗಳಲ್ಲಿ ಪ್ರತಿಯೊಂದು ಹಳ್ಳಿ ಹಳ್ಳಿಗೂ ಹೋಗಿ ಶಿವಾನುಭವ ಪ್ರವಚನಗೈದು ಧರ್ಮಜಾಗೃತಿ ಮಾಡಿದರು. ಈ ಪ್ರವಚನ, ಶಿವಾನುಭವ ಚರವರ್ಯದ ಕಾಯಕ ಸಮಗ್ರ ಹದಿನೆಂಟು ವರ್ಷಗಳ ಕಾಲ ನಡೆಯಿತು. ಈ ಸೇವೆಯೇ ಅವರು ಜನಮನದಲ್ಲಿ ಸ್ಥಾನ ಗಳಿಸಿಕೊಳ್ಳಲು ಕಾರಣವಾದುದು.

ಇವರು ಅವಿಶ್ರಾಂತವಾಗಿ ಈ ಶಿವಾನುಭವ ಪ್ರವಚನ ಕಾರ್ಯ ನಡೆಸಿದ್ದರಿಂದ ಜನತೆಯಲ್ಲಿ ಅವರ ಬಗ್ಗೆ ಗೌರವ, ಶ್ರದ್ಧೆ ಮೂಡಿ ನಿಂತಿತ್ತು. ಆಗಲೇ ಚಿತ್ತರಗಿ ಪೀಠದ ಶ್ರೀಗುರು ಮಹಾಂತಸ್ವಾಮಿಗಳು ಲಿಂಗೈಕ್ಯರಾದರು. ಆಗ ಮೂರು ಸಾವಿರಮಠದ ಶ್ರೀಮನ್ಮಹಾರಾಜ ನಿರಂಜನ ಜಗ

ದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿ ಗಳ ಅಪ್ಪಣೆಯ ಮೇರೆಗೆ ಹಾಗೂ ಆ ಪೀಠದ ಸದ್ಭಕ್ತರ ಇಚ್ಛೆಯ ಮೇರೆಗೆ ಸಾವಿರದೊಂಬೈನೂರ ಎಪ್ಪತ್ತರಲ್ಲಿ ಒಂದು ಸುಮುಹೂರ್ತದಲ್ಲಿ ಸ್ವತಃ ಜಗದ್ಗುರುಗಳೇ ಪೀಠಕ್ಕೆ ಇವರನ್ನು ಅಧಿಕಾರಿಗಳನ್ನಾಗಿ ಮಾಡಿದರು. ಬಹು ವೈಭವ ದಿಂದ ಈ ಸಮಾರಂಭ ನೆರವೇರಿತು. ಅಂದಿನಿಂದ ಕೇವಲ ಈ ನಾಲ್ಕು ವರ್ಷಗಳಲ್ಲಿ ಶ್ರೀಗಳು ಆದ್ಭುತವೆನ್ನುವ ರೀತಿ ಯಲ್ಲಿ ಚಿತ್ತರಗಿ, ಇಲಕಲ್ಲ ಹಾಗೂ ಉಳಿದ ಶಾಖಾಮಠ ಗಳ ಜೀರ್ಣೋದ್ಧಾರ, ನವೀಕರಣ ಕಾರ್ಯ ಮಾಡಿದ್ದಾರೆ. ಶ್ರಾವಣ ಮಾಸದ ಇಡೀ ತಿಂಗಳು ಇಲಕಲ್ಲ ಹಾಗೂ ಚಿತ್ತರಗಿ ಮಠಗಳಲ್ಲಿ ಶಿವಾನುಭವ, ಶಿವಕೀರ್ತನೆ, ಪುರಾಣಪ್ರವಚನ, ವಿದ್ವಾಂಸರಿಂದ ಭಾಷಣ, ಕಲಾವಿದರಿಂದ ಸಂಗೀತ ಕಾರ್ಯ ಕ್ರಮ ನಡೆಸಿ ಭಕ್ತರಿಗೆ, ಜಿಜ್ಞಾಸುಗಳಿಗೆ ಜ್ಞಾನ ದಾಸೋಹ ಮಾಡಿಸುತ್ತಾರೆ–ಅನ್ನದಾಸೋಹದೊಂದಿಗೆ.

ಆದರೊಂದಿಗೆ ತಮ್ಮ ಗುರುಗಳಿಂದ ನಡೆದುಕೊಂಡು ಬಂದಿರುವ ಚಿತ್ತರಗಿಯ ಜಾತ್ರೆಯನ್ನು ಕಾರ್ತಿಕ ಶುದ್ಧ ಗೌರೀ ಹುಣ್ಣಿಮೆಯಂದು, ಇಲಕಲ್ಲ ಜಾತ್ರೆಯನ್ನು ಶ್ರಾವಣ ಮಾಸದ ಕೊನೆಯ ಸೋಮವಾರ ಹಾಗೂ ಮಾರನೆಯ ದಿನ ಅಡ್ಡಪಲ್ಲಕ್ಕಿ ಉತ್ಸವ, ವಿಜಯ ಮಹಾಂತಶಿವ ಯೋಗಿಗಳ ಪುಣ್ಯತಿಥಿ ಕಾರ್ತಿಕ ಶುದ್ಧ ಪಂಚಮಿಯಂದು ಎಲ್ಲವನ್ನೂ ಚಾಚೂತಪ್ಪದೆ ಇಂದಿಗೂ ಅದ್ದೂರಿಯಿಂದ ಶ್ರೀಗಳು ಹಾಗೂ ಅಲ್ಲಿಯ ಭಕ್ತರು ನಡೆಸಿಕೊಂಡು ಬರುತ್ತಿದ್ದಾರೆ.

ಒಪ್ಪೋಲೆ

					ತಪ್ಪು	ಒಪ್ಪು
1.	ಪುಟ	8	ಸಾಲು	3	ನಾಗರದಲ್ಲಿ	ಸಾಗರದಲ್ಲಿ
2.	,,	30	,,	14	ಆಂಗಶ್ರದ್ಧೆ	ಲಿಂಗಶ್ರದ್ಧೆ
3.	,,	34	,,	6	ಮಸಾಗಿ	ಮಸಾರಿ
4.	,,	40	,,	14	ಶ್ರೀ.ಪ್ರ.	ಶ್ರೀ.ನಿ.ಪ್ರ.
5.	,,	45	,,	7	ವಿಜಯ ಮಹಾಂತೇಶ್ವರ	ವಿಜಯಮಹಾಂತೇಶ್ವರರ

ಪುಸ್ತಕದ ಆರಂಭದ ಪುಟಗಳಲ್ಲಿರುವ "ಸುಪ್ರಭಾತ" ಶ್ರೀ ಗುರುಸ್ವಾಮಿ ಕಲಿಕೇರಿ ಅವರದು.

ಕನ್ನಡ ನಾಡು ಮತ್ತು ಕನ್ನಡಿಗರ ಚರಿತ್ರೆ

ಐ ಬಿ ಎಚ್ ಪ್ರಕಾಶನ
ಬೆಂಗಳೂರು ೧

ಇಂಡಿಯಾ ಬುಕ್ ಹೌಸ್



251